
ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ಶಿಬಿರ



ಗಡಿನಾಡಿನ ಗಾಂಧೀ : ಖಾನ್ ಅಬ್ದುಲ್ ಗಫಾರ್ ಖಾನ್

ಸಂಪುಟ : ೧೧ ಡಿಸೆಂಬರ್ ೧೯೬೦ ಸಂಚಿಕೆ ೬

ಈ ಸಂಚಿಕೆಯಲ್ಲಿ

ನಮ್ಮ ವಿಳಾಸ :– ಜನಪದ ವಿಚಾರ

ಜನಪದ ಸೇವಾ ಟ್ರಸ್ಟ್, ಮೇಲುಕೋಟೆ–571431

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ಸಂಪುಟ: ೧೧ ಮೇಲುಕೋಟೆ. ಡಿಸೆಂಬರ್ ೧೫, ೧೯೯೦ ಸಂಚಿಕೆ ೬

ನಿಮ್ಮೊಂದಿಗೆ........

'ಅನೇಕತೆಯಲ್ಲಿ ಏಕತೆ', 'ಬಹು ಶಾಖೆಗಳ ಮರ' ಮುಂತಾದ ಪದ ಗುಚ್ಛಗಳ ಮೂಲಕ ಈ ದೇಶದ ಸಾಮಾಜಿಕ ಸ್ಥಿತಿಯನ್ನು ವರ್ಣಿಸುವುದಿದೆ. ಸವೆದು ಹೋಗಿರುವ ಈ ಪದಪುಂಜಗಳಲ್ಲಿ ಒತ್ತು ಇರುವುದು ಏಕತೆಗೋ, ಭಿನ್ನತೆಗೋ, ಶಾಖೆಗೋ, ಕಾಂಡಕ್ಕೋ ಎಂದು ಸ್ಪಷ್ಟವಾಗುವುದಿಲ್ಲ.

ಭಾಷೆ ಮತ್ತು ಸಂಸ್ಕೃತಿಗಳ ಪ್ರಾದೇಶಿಕತೆ ಸೆಟೆದು ನಿಲ್ಲುತ್ತಿರುವ ಈ ದಿನಗಳಲ್ಲಿ ಈ ದೇಶ ಹಲವು ಹೂಗಳ ತೋಟದ ಬದಲು ಜಂಗೀ ಕುಸ್ತಿಯ ಅಖಾಡದಂತೆ ಕಾಣಿಸುತ್ತಿದೆ. ಈ ಪ್ರಾದೇಶಿಕ–ಸಾಂಸ್ಕೃತಿಕ ನಿಷ್ಠೆ ರಾಷ್ಟ್ರವಿರೋಧಿ ಎಂಬ ಆತಂಕವೂ ಬೆಳೆಯುತ್ತಿದೆ. ನಿಷ್ಠೆಯ ಬಗ್ಗೆ ಪಿಸುಮಾತು – ಹುಬ್ಬೇರಿಸುವಿಕೆ ನಡೆಯುತ್ತಿದೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಭಾರತದ ಉಪಖಂಡಕ್ಕೆ ಒಂದು ರಾಷ್ಟ್ರೀಯತೆಯನ್ನು ಕುದುರಿಸುವ ಯತ್ನ ಮಾಡಲಾಯಿತು. ರಾಮಾಯಣ, ಮಹಾಭಾರತ ಮುಂತಾದ ಸಾಂಸ್ಕೃತಿಕ ಕೊಂಡಿಗಳನ್ನೇ ರಾಷ್ಟ್ರೀಯತೆಯ ಮಾನದಂಡ ಗಳಾಗಿ ಭಾವಿಸಲಾಯಿತು. ಬ್ರಿಟೀಷರನ್ನು ದಬ್ಬುವ ಹುರುಪಿನಲ್ಲಿ ಪ್ರಾಂತೀಯ ಸಾಂಸ್ಕೃತಿಕ ಪ್ರಭುತ್ವಗಳು ತಗ್ಗಿಬಗ್ಗಿ ಮರೆಯಾದವು. ಸ್ವಾತಂತ್ರ್ಯದ ಭರವಸೆಯ ಬೆನ್ನಲ್ಲೇ ನಡೆದ ದೇಶವಿಭಜನೆ, ತರುವಾಯದ ಭಾಷಾವಾರು ಪ್ರಾಂತ್ಯ ರಚನೆ ಈ ಪ್ರಾದೇಶಿಕ–ಸಾಂಸ್ಕೃತಿಕ ನಿಷ್ಠೆಯನ್ನು ಜಾಹೀರುಗೊಳಿಸಿದವು. (ಧಾರ್ಮಿಕ ಪ್ರಾದೇಶಿ ಕತೆಯನ್ನು ಜಿನ್ನಾ ಬಳಸಿಕೊಂಡರು. ಇಂದು ದೇಶವ್ಯಾಪಿ ಅಸ್ಪಷ್ಟ ಕೊಂಡಿಗಳನ್ನು ಹೊಂದಿರುವ ಹಿಂದೂ ಧಾರ್ಮಿಕ ನೆಲೆಯನ್ನು ಭಾಜಪ ಬಳಸಿಕೊಳ್ಳುತ್ತಿದೆ.)

ಸಂವಿಧಾನಿಕವಾಗಿ ಪಾಶ್ಚಾತ್ಯ ಕಲ್ಪನೆಯ ರಾಜ್ಯವನ್ನು ಸ್ಥಾಪಿಸಲಾಯಿತು. ರಾಜ್ಯವು ಪಾಲಕನ ಪಾತ್ರವಹಿಸಿ ಪ್ರಜೆಯ ನಿಷ್ಠೆಯನ್ನು ಪಡೆಯಲು ಯತ್ನಿಸಿತು. ಈ ನಿಷ್ಠೆಯನ್ನು 'ರಾಷ್ಟ್ರೀಯ ಸಮಗ್ರತೆ' ಮುಂತಾದ ಪದಗಳ ಮೂಲಕ ನಿಗದಿ ಸುವ ಯತ್ನವನ್ನು ರಾಜ್ಯಶಕ್ತಿ ಮಾಡುತ್ತದೆ.

ಆದರೆ ಪಾರಂಪರಿಕವಾಗಿ ತನ್ನ ಭಾಷೆ, ಜಾತಿ, ಸಮುದಾಯದ ಪ್ರಾಂತೀಯ ಪರಿಸರದ ಸಂಸ್ಕೃತಿಯೊಳಗೆ ಬಾಳಿದವನ ನಿಷ್ಠೆ ವರ್ಗಾಂತರಗೊಳ್ಳುವುದು ಕಷ್ಟಸಾಧ್ಯ.

ಆದ್ದರಿಂದಲೇ ನಮ್ಮ ಜನಸಮುದಾಯ ರಾಜ್ಯಶಕ್ತಿಯನ್ನು ಭೌತಿಕ ಸೌಕರ್ಯಕ್ಕೆ ಬಳಸಿಕೊಳ್ಳುತ್ತಾ, ಪ್ರಾದೇಶಿಕ-ಸಾಂಸ್ಕೃತಿಕ ಶಕ್ತಿಯನ್ನು ಆಂತರಿಕ ಸುಖ, ನೆಮ್ಮದಿಗೂ ಬಳಸಿಕೊಳ್ಳುತ್ತಿದೆ. ಈ ಪ್ರಾದೇಶಿಕ–ಸಾಂಸ್ಕೃತಿಕ ನಿಷ್ಠೆ ಹೆಚ್ಚು ಪೂರ್ಣವಾದದ್ದು, ಅದರಿಂದಾಚೆಯ ತಾಯಿಭುವನೇಶ್ವರಿ, ಭಾರತಾಂಬೆ ಎಲ್ಲವೂ ಕಾಲ್ಪನಿಕವೇ, ಹೆಚ್ಚೆಂದರೆ ಭಾವುಕ ಚಿತ್ರಗಳು.

ಆಡಳಿತಾತ್ಮಕ ಕೇಂದ್ರೀಕರಣವನ್ನು ಬಯಸುವ ಸರ್ಕಾರ ರಾಷ್ಟ್ರೀಯತೆಯನ್ನು ರಾಜ್ಯವ್ಯವಸ್ಥೆ, ಆರ್ಥಿಕತೆಗಳ ಹೆಸರಿನಲ್ಲಿ ಜನರ ಮುಂದಿಡುತ್ತದೆ. ಏಕಸಂಸ್ಕೃತಿಯ ಸಾರ್ವತ್ರೀಕರಣವನ್ನು ಬಯಸುವ ಮಂದಿ ರಾಷ್ಟ್ರೀಯತೆಯನ್ನು ಅಸ್ಪಷ್ಟ ಸಾಂಸ್ಕೃತಿಕ ಮಾದರಿಯಾಗಿ ಮುಂದಿಡುತ್ತದೆ. ಕೇಂದ್ರೀಕರಣದ ಸರ್ಕಾರ ಬಾಹ್ಯ ಅಪಾಯವನ್ನು ಜನರಲ್ಲಿ ಬಿತ್ತಿದರೆ, ಎರಡನೆಯದು ಆಂತರಿಕ ಶತ್ರುವನ್ನು ಬೆಟ್ಟು ಮಾಡಿ ತೋರುತ್ತದೆ. ಇವೆರಡೂ ಆಯಾಯ ದೃಷ್ಟಿಕೋನದ ಸೃಷ್ಟಿಗಳೇ ಹೊರತು ನಿಜವೇ ಆಗಿರಬೇಕಿಲ್ಲ.

ಸ್ಟಾಲಿನ್ ಸಾಧಿಸಿದ್ದು ಕೇಂದ್ರೀಕೃತ ರಾಜ್ಯಶಕ್ತಿಯ ರಾಷ್ಟ್ರೀಯತೆಯನ್ನು. ಹಿಟ್ಲರ್ ತಾತ್ಕಾಲಿಕವಾಗಿ ಕುದುರಿಸಿದ್ದು ಈ ಭಾವನಾತ್ಮಕ ರಾಷ್ಟ್ರೀಯತೆಯನ್ನು.

ಇಂದು ಕಾಂಗ್ರೆಸ್ ಸಾಧಿಸಿದ್ದು ಕೇಂದ್ರೀಕರಣವನ್ನು. ಪ್ರಾಂತೀಯ ಸಂಸ್ಕೃತಿ, ಪರಂಪರೆಗೆ ಸ್ವಾಯತ್ತತೆ ದೊರಕದಿದ್ದಾಗ ಮನಸ್ತಾಪ ಶುರುವಾಗುತ್ತದೆ. ರಷ್ಯಾದಲ್ಲಿ ಇಂದು ನಡೆಯುತ್ತಿರುವುದಕ್ಕೂ ನಮ್ಮದೇ ಆದ ಗೂರ್ಖಾಲ್ಯಾಂಡ್, ಬೋಡೋ ಬೇಡಿಕೆಗಳಿಗೂ ಬಹಳ ವ್ಯತ್ಯಾಸವಿಲ್ಲ. ಪ್ರಾದೇಶಿಕ ನಿಷ್ಠೆಯನ್ನು ಆಡಳಿತಾತ್ಮಕವಾಗಿಯಾದರೂ ಒಪ್ಪಿಕೊಳ್ಳುವ ಗುಣ ರಾಜ್ಯಶಕ್ತಿಗಿದ್ದರೆ ಆ ಪ್ರಜಾಸತ್ತೆ ಜೀವಂತವಾಗಿದ್ದೀತು.

ಹೆಚ್ಚು ಅಪಾಯಕಾರಿಯಾಗುವುದು ಸಾಂಸ್ಕೃತಿಕ ಕೇಂದ್ರೀಕರಣ. ಅಖಿಲ ಭಾರತ ಸಂಸ್ಕೃತಿ (ಹಿಂದೂ ಸಂಸ್ಕೃತಿ!) ಯೊಂದನ್ನು ಗಾಳಿ ಬೆಲೂನು ಮಾಡಿ ತೋರುವ ಭಾಜಪ ಮತ್ತಿತರ ಸಂಸ್ಥೆಗಳು ಅದರಿಂದಾಚೆಗೆ ಇರುವ ಎಲ್ಲ ಸ್ಥಳೀಯ ಸಂಸ್ಕೃತಿ, ಭಾಷೆ, ಜೀವನ ವಿಧಾನಗಳನ್ನು ಪ್ರಶ್ನಿಸುತ್ತವೆ. ಇಂದು ಮುಸ್ಲಿಮರನ್ನು, ನಮ್ಮದೇ ಭಾಷೆ ಉರ್ದುವನ್ನು ಪ್ರಶ್ನಿಸುವ ಈ ಮನೋಭಾವ ನಾಳೆ ಕನ್ನಡ, ಭೋಜ್‌ಪುರಿ, ಪಂಜಾಬೀ ಹೀಗೆ ಎಲ್ಲ ಸ್ಥಳೀಯ ಸಾಂಸ್ಕೃತಿಕ ಚೌಕಟ್ಟನ್ನು ರಾಷ್ಟ್ರೀಯತೆಗೆ ವಿರುದ್ಧವೆಂಬಂತೆ ಪರಿಗಣಿಸಿಯಾವು.

ಆದ್ದರಿಂದಲೇ ಇಂದು ಸಾಂಸ್ಕೃತಿಕ ಗುತ್ತೇಗಾರಿಕೆಯನ್ನು ತಡೆಯಲು ಈ ಸ್ಥಳೀಯ, ಪ್ರಾಂತೀಯ ಸಾಂಸ್ಕೃತಿಕ ನಿಷ್ಠೆಯನ್ನು ಒಪ್ಪಿಕೊಳ್ಳುವುದು ವಿಹಿತ. ಈ ಚೌಕಟ್ಟಿನೊಳಗೇ ಈ ಉಪಖಂಡದ ಸಮಗ್ರತೆ ಅನಿವಾರ್ಯ ಎಂಬ ವ್ಯಾವಹಾರಿಕ ಸತ್ಯವನ್ನು ಮನಗಾಣಿಸಬೇಕೇನೋ.

-ಕೆ. ಪಿ. ಸುರೇಶ
(ಸಂಪಾದಕ ಮಂಡಳಿಯ ಪರವಾಗಿ)

ನೆಲದ ಶಕ್ತಿಯ ಸಾಧ್ಯತೆ

—ಯು. ಆರ್. ಅನಂತಮೂರ್ತಿ

ನಾವು ಇಂದು, ಇಲ್ಲಿ, ಹೀಗೆ ಎಲ್ಲರೂ ಒಟ್ಟಿಗೆ ಸೇರಿ ನಮಗೆ ಅಗತ್ಯವಾದ ನಾಟಕ, ಸಿನೆಮಾ, ಸಾಹಿತ್ಯ ಇತ್ಯಾದಿಗಳ ವಿಚಾರ ಮಾಡುವಾಗ ಇದು ಯಾವ ರೀತಿಯ ಅಪೇಕ್ಷೆ, ಈ ಅಪೇಕ್ಷೆಯ ಹಿಂದಿರುವ ಶಕ್ತಿ–ಪ್ರೇರಣೆಗಳು ಯಾವ ರೀತಿಯವು ಎಂಬುದರ ಬಗ್ಗೆ ಸ್ಪಷ್ಟತೆ ತಂದುಕೊಳ್ಳಲು ಪ್ರಯತ್ನಿಸುವುದು ಅತ್ಯವಶ್ಯಕ. ನಮ್ಮ ಇಂದಿನ ಅರ್ಥಪೂರ್ಣ ಕಲೆಯೆಲ್ಲ ಹುಟ್ಟುತ್ತಿರುವುದು, ಹುಟ್ಟ ಬೇಕಾದ್ದು ನಮ್ಮ ಇಂದಿನ ನಿರ್ದಿಷ್ಟ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ರಾಜ ಕೀಯ ಸನ್ನಿವೇಶಕ್ಕೆ ಸಂಕೀರ್ಣವಾಗಿ ಮುಖಾಮುಖಿಯಾದಾಗಲೇ, ಅದನ್ನು ಅರ್ಥ ಮಾಡಿಕೊಳ್ಳಲು ಅದಕ್ಕೆ ಸೂಕ್ಷ್ಮ ಸಂವೇದನೆಯಿಂದ ಪ್ರತಿಕ್ರಿಯಿಸಿದಾಗಲೇ, ಅದರೆಲ್ಲ ಸಂಕಟಗಳನ್ನು ಎದುರಿಸಿ ಸೃಜನಶೀಲವಾಗಿ ಸೆಣಸಾಡುವುದರಿಂದಲೇ. ಪ್ರಸ್ತುತ ಐತಿಹಾಸಿಕ ಸನ್ನಿವೇಶದ ಪ್ರತ್ಯಕ್ಷ–ಪರೋಕ್ಷ ಪ್ರೇರಣೆಗಳು, ಹಲವು ಬಗೆಯ ದ್ವಂದ್ವ ಸಂಘರ್ಷಗಳು ಇವು: ನಮ್ಮ ಭಾರತೀಯ, ಕನ್ನಡ ಪರಂಪರೆಯ ಬಗ್ಗೆ ಹುಂಬುಹೆಮ್ಮೆ ತಾಳದೆಯೆ ಅದಕ್ಕೆ ಬದ್ಧರಾಗಿರುವುದು. ಹಾಗೆಯೆ, ಪಾಶ್ಚಾತ್ಯ ನವನಾಗರೀಕತೆಯ ಬಗ್ಗೆ ತೀವ್ರ ಆಸಕ್ತಿ ಇಟ್ಟುಕೊಂಡದೂ ಅಲ್ಲಿಯ ದೋಷಗಳ ಬಗ್ಗೆ ನಿಷ್ಠುರ ಎಚ್ಚರ ಕಾದುಕೊಂಡಿರುವುದು. ನಮ್ಮನ್ನು ರಾಷ್ಟ್ರವಾಗಿಯೂ ಒಟ್ಟಿಗೆ ಗ್ರಹಿಸಿಕೊಂಡು ನಡೆಯಬೇಕಾದ್ದು ಇಂದಿನ ಅತ್ಯಂತ ದೊಡ್ಡ ಅವಶ್ಯಕತೆ. ಇಡೀ ಮಾನವ ಕುಲ, ಹಾಗೆಯೇ, ಇಂದಿನ ಭಾರತ ಕೂಡಾ ತರತಮ ಮಾನವತ್ವದಿಂದ ಸಮಾನ ಮಾನವತ್ವದತ್ತ ಸಾಗುತ್ತಿರುವ ಇವತ್ತಿನ ಸಂದರ್ಭದಲ್ಲಿ ಭಾರತದ ಮಟ್ಟಿ ಗಂತೂ ಇದು ಬಹುಮುಖ್ಯ. ಹಾಗೆಯೇ ನಾವು ಇವತ್ತು ನಮ್ಮ ಪರಂಪರೆಯ ಸಂರಚನೆಯಲ್ಲಿದ್ದ ಸನ್ನಿವೇಶ ಸೂಕ್ಷ್ಮ ಅಂಶಗಳನ್ನು ಕಡಿಮೆ ಮಾಡಿಕೊಳ್ಳುತ್ತ ಸನ್ನಿ ವೇಶಮುಕ್ತ ಅಂಶಗಳನ್ನು ಹೆಚ್ಚಿಸಿಕೊಳ್ಳುತ್ತ ನಡೆದಿದ್ದೇವೆ. ಇದೂ ಕೂಡಾ ತರತಮ ಮಾನವತ್ವದಿಂದ ಸಮಾನ ಮಾನವತ್ವದತ್ತ ಹೋಗುವ ಮಾರ್ಗವೆ. ಈ

ಪ್ರಗತಿ, ಪ್ರಕ್ರಿಯೆಯಿಂದ ಕೂಡಾ ಇಂದಿನ ನಮ್ಮ ಕಲಾವಿದರು ಸೃಜನಶೀಲ ಪ್ರೇರಣೆ ಪಡೆಯಬೇಕು. ಆದರೆ ಆ ಅನುಭವವನ್ನು ತೆಳು ಮಾಡದೆ, ಸರಳಗೊಳಿಸದೆ, ಭಾವುಕ ವಾಗಿಸದೆ ಕಲೆಯ ಕಟ್ಟೆಚ್ಚರದಿಂದ ಅದನ್ನು ಎದುರಿಸಬೇಕು. ನಮ್ಮ ಹಿಂದಿನ ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ, ಹಾಗೆಯೇ ಕೇಂದ್ರೀಕರಣವನ್ನು ಬೇಡುವ ಇಂದಿನ ನವ ವಸಾಹತುಶಾಹಿ ಸಂದರ್ಭದಲ್ಲಿ ಕೆಲವು ದೊಡ್ಡ ಅಪಾಯ ಗಳಿವೆ. ನಮ್ಮಲ್ಲೀ ಕಾಣುವಂತೆ, ನಮ್ಮ ನವ ವಿದ್ಯಾವಂತ, ಅಕ್ಷರಸ್ಥ ವರ್ಗವೆಲ್ಲ ಪಶ್ಚಿಮವನ್ನು, ಅದರಲ್ಲೂ ಅಮೇರಿಕವನ್ನು ತನ್ನ ಕನಸಾಗಿಟ್ಟುಕೊಂಡಿರುವುದು, ತನ್ನ ಸ್ವಂತ ನೆಲದ ಬಗ್ಗೆ, ಜನರ ಬಗ್ಗೆ ನಿರ್ಲಕ್ಷ್ಯ ತಾಳಿ ಪಾಶ್ಚಿಮಾತ್ಯ ನವ ನಾಗರಿಕತೆಯ ಪೊಳ್ಳು ಅಂಶಗಳನ್ನೇ ತನ್ನ ಆದರ್ಶವಾಗಿಟ್ಟುಕೊಂಡಿರುವುದು. ಇದು ನಮ್ಮ ಮಟ್ಟಿಗೆ ಅಷ್ಟೇ ಅಲ್ಲ, ಪಶ್ಚಿಮದ್ದೇ ಆದ ಆರ್ಥಿಕವಾಗಿ ಮುಂದುವರಿದ ಸಣ್ಣ ಪುಟ್ಟ ರಾಷ್ಟ್ರಗಳ ಮಟ್ಟಿಗೂ ನಿಜ. ಉದಾಹರಣೆಗೆ: ಇಂಗ್ಲೆಂಡ್, ಸ್ವೀಡನ್ ಅಂಥ ದೇಶಗಳು ಕೂಡ ಇಂದು ಸಾಂಸ್ಕೃತಿಕವಾಗಿ ಅಮೇರಿಕದ ವಸಾಹತುಗಳು, ಅಲ್ಲಿಯ ಜನ ಟಿಲಿವಿಷನ್ ಮೇಲೆ ನೋಡ ಬಯಸುವುದು ತಮ್ಮದೇ ದೇಶ, ಸಂಸ್ಕೃತಿಯ ಕಾರ್ಯಕ್ರಮಗಳನ್ನಲ್ಲ, ಅಮೇರಿಕಾದ್ದನ್ನು. ಇಂಥಲ್ಲಿ ನಮ್ಮ ಭಾರತದ, ಕನ್ನಡದ ನಿಜಸತ್ವ ಉಳಿದುಕೊಂಡು ಬಂದಿರುವುದು ಬಹುಮಟ್ಟಿಗೆ ನಮ್ಮ ನಿರಕ್ಷರಸ್ಥರಲ್ಲಿ, ಇನ್ನೂ 'ನವನಾಗರಿಕತೆ'ಯ ಆಮಿಷಗಳಿಗೆ ಬಲಿಯಾಗದೆ ಉಳಿದಿರುವ ಈ ನೆಲದ ಜನರಲ್ಲಿ. ಈ ದ್ವಂದ್ವ ಮತ್ತೆ ಮಾರ್ಕ್ಸ್ ಹಾಗೂ ಗಾಂಧಿಯ ನಡುವಿನ ದ್ವಂದ್ವ ಕೂಡ. ಭಾರತದಂತಹ ಪ್ರಾಚೀನ, ಜಡ ಸಮಾಜ ನಾಶಗೊಂಡು ಹೊಸ ಹುಟ್ಟು ಪಡೆಯಲು ಐರೋಪ್ಯೀಕರಣ ಅನಿವಾರ್ಯವೆಂದು ಮಾರ್ಕ್ಸ್ ನಂಬಿದ್ದರೆ ಇಂಥ ಜಡವೆಂದು ತೋರುವ ಸಮಾಜದಲ್ಲೂ ನಾವು ಸ್ವೀಕರಿಸಬೇಕಾದ ಇತ್ಯಾತ್ಮಕ ಜೀವದಾಯಕ ಅಂಶಗಳು ಹೇರಳವಾಗಿವೆ ಎಂಬುದನ್ನು ಗಾಂಧಿ ಕಂಡುಕೊಂಡಿದ್ದರು. ಹಾಗೆಯೇ, ಗಾಂಧಿ ಈ ನವನಾಗರಿಕತೆಯೆನ್ನುವುದು ಮಾನವನಿಗೆ ಅವಶ್ಯವಾದ್ದಲ್ಲ, ಅನಿವಾರ್ಯವಾದ್ದಲ್ಲ ಎಂಬುದನ್ನೂ ಅಷ್ಟು ಹಿಂದೆಯೇ ಅರ್ಥಮಾಡಿಕೊಂಡವರಾಗಿದ್ದರು. ಅವರು ಮೇಲ್ಕಂಡ ಎಲ್ಲ ದ್ವಂದ್ವಗಳ ಸವಾಲನ್ನು ಎದುರಿಸಿ, ಅನುಭವಿಸಿ ಅದಕ್ಕೆ ಅಸಾಧಾರಣವಾದ ಸೃಜನಶೀಲ ಸಮತ್ವದ ಪರಿಹಾರವನ್ನು ಶೋಧಿಸಿಕೊಂಡಿದ್ದರು. ಗಾಂಧಿಯ ಪ್ರಕಾರ ಈ ಭೌತಿಕತೆಯ, ನಾಗರಿಕತೆಯ ರೋಗ ನಮ್ಮನ್ನೆಲ್ಲ, ಭಾರತವನ್ನು, ತೃತೀಯ ಜಗತ್ತಿನ ದೇಶಗಳನ್ನು, ಹಾಗೆಯೇ, ಪಶ್ಚಿಮ ರಾಷ್ಟ್ರಗಳನ್ನೂ ಸಹ, ರಾವು ಬಿಟ್ಟಂತೆಯೇ ಬಿಟ್ಟು ಹೋಗಬೇಕಾದ್ದು. ಹಾಗಾಗಿ, ಗಾಂಧಿ ಮನುಷ್ಯನನ್ನು ಮುಪ್ಪುರಿ ಮಾಡುವ ಮಿಥ್ಯ ನಾಗರಿಕತೆಯ ಕಲ್ಪನೆಯನ್ನು ಧಿಕ್ಕರಿಸಿ ಮನುಷ್ಯನಿಗೆ, ಅವನ ವ್ಯಕ್ತಿತ್ವಕ್ಕೆ, ಅವನ ದೈನಿಕಗಳಿಗೆ, ದೈವಿಕತೆಯನ್ನು

೧೧ ನೇ ಪುಟ ನೋಡಿ

ಪ್ರಜಾತಂತ್ರ

– ಜೆ. ಸಿ. ಕುಮಾರಪ್ಪ

(ಜೆ.ಸಿ. ಕುಮಾರಪ್ಪ ಪಾಶ್ಚಿಮಾತ್ಯ ಅರ್ಥಶಾಸ್ತ್ರ ಓದಿ ನಂತರ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿದ್ದ ಓರ್ವ ವಿಚಾರವಂತ ವ್ಯಕ್ತಿ. ಅವರು ಗಾಂಧೀಜಿಯವರ ವಿಚಾರಗಳಿಗೆ ಮುಖ್ಯವಾಗಿ, ಆರ್ಥಿಕ ವಿಚಾರಗಳಿಗೆ, ಒಂದು ಸ್ವರೂಪ ಕೊಟ್ಟರು. ಅದನ್ನು ಅವರು 'ಶಾಶ್ವತ ಅರ್ಥಶಾಸ್ತ್ರ' ಎಂದು ಕರೆದರು. ಈ ಅರ್ಥಶಾಸ್ತ್ರಕ್ಕೂ ಈಗ ಪ್ರಚಲಿತವಿರುವ ಅರ್ಥಶಾಸ್ತ್ರಕ್ಕೂ ಇರುವ ವ್ಯತ್ಯಾಸ ನಮಗೆ ತಿಳಿದರೆ ಅದರಿಂದ ಬಹಳ ಪ್ರಯೋಜನವುಂಟು. ಅದಕ್ಕಾಗಿ ಆ ಪುಸ್ತಕದ ಭಾಗಗಳನ್ನು ಕ್ರಮಶಃ ಪ್ರಕಟಿಸಲಾಗುತ್ತಿದೆ. ಅನುವಾದ : ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ.—ಸಂ.)

ಮೂಲತಃ ಭರತಖಂಡ ಗಣರಾಜ್ಯ. ಒಂದೊಂದು ಹಳ್ಳಿಯೂ ತನ್ನ ಆಡಳಿತವನ್ನು ತಾನೇ ನಡೆಸುತ್ತಿದ್ದ ಗ್ರಾಮರಾಜ್ಯವಾಗಿತ್ತು. ಸಾಮಾನ್ಯವಾಗಿ ಸಮಾಜದಲ್ಲಿ ಕಾಣಬರುವ ಸಾಧಾರಣ ಜನರನ್ನೇ ಆಧಾರವಾಗಿಟ್ಟುಕೊಂಡು ಭರತ ಖಂಡ ತನ್ನ ರಾಜ್ಯ ಪದ್ಧತಿಯನ್ನು ರಚಿಸಿತು.

ಮಾನವ ಸಮಾಜದಲ್ಲಿ ಸಮಸ್ತ ಕಾರ್ಯಕಲಾಪದಲ್ಲಿಯೂ ಎರಡು ದೃಷ್ಟಿ ಇರುತ್ತವೆ : ಒಂದು ದೀರ್ಘ ದೃಷ್ಟಿ, ಇನ್ನೊಂದು ತತ್ಕಾಲದ ದೃಷ್ಟಿ–ಸದ್ಯಃಫಲದ್ದು. ನಮ್ಮಲ್ಲಿ ಅನೇಕರಿಗೆ ದೀರ್ಘದೃಷ್ಟಿ ಸಾಧ್ಯವಿಲ್ಲ. ದೀರ್ಘದೃಷ್ಟಿಯೆಂದರೆ ಮಾಡಿದ ಕೆಲಸದ ಫಲ ಕಣ್ಣಿಗೆ ಕಾಣಲು, ಕೈಗೆ ಸಿಗಲು ಬಹಳ ಕಾಲ ಬೇಕು. ಜನರು ಅಷ್ಟು ಕಾಲ ಕಾಯಲೊಲ್ಲರು. ನಮಗೆಲ್ಲ ತತ್ಕಾಲದ ದೃಷ್ಟಿಯೇ – ಚೆನ್ನಾಗಿ ತಿಂದು ತೇಗಿ ಸುಖವಾಗಿರೋಣ ಎಂಬುದು. ನೂರರಲ್ಲಿ ತೊಂಬತ್ತೊಂಬತ್ತು ಜನರದು ಈ ದೃಷ್ಟಿ. ಆದರೆ ಇಡೀ ಸಮಾಜದ ಹಿತಕ್ಕಾಗಿ ಕೆಲವು ಕೆಲಸಗಳನ್ನು ಮಾಡಲೇಬೇಕು. ಇವಕ್ಕೆ ದೀರ್ಘದೃಷ್ಟಿ ಅಗತ್ಯ. ಪ್ರಜಾತಂತ್ರ ರೂಪಿಸುವುದು ಇದನ್ನೇ. ಆಡಳಿತ ಸಫಲವಾಗಿ, ಅನೇಕ ಜನರ ಹಿತಸಾಧನೆಯಾಗಬೇಕಾದರೆ ಸರಕಾರ ದೀರ್ಘದೃಷ್ಟಿಯುಳ್ಳವರ ಕೈಯಲ್ಲಿರಬೇಕು. ತತ್ಕಾಲದ ದೃಷ್ಟಿಯ ಜನರಿಗೆ ಸರಕಾರ ವಶವಾದರೆ ಪರಿಣಾಮ ಭಯಂಕರ. ಅವರ ಮಂದದೃಷ್ಟಿ ಯುದ್ಧಗಳಿಗೆ ಕಾರಣವಾಗುತ್ತದೆ.

ಈ ರೀತಿ ವಿಚಾರ ಮಾಡಿದರೆ ಅಮೆರಿಕಾ, ಇಂಗ್ಲೆಂಡುಗಳು ಪ್ರಜಾತಂತ್ರಗಳೇ ಅಲ್ಲ. ಅಲ್ಲಿರುವುದು ಪೂರಾ ನಿರಂಕುಶಾಧಿಕಾರ. ಯುದ್ಧ ಕಾಲದಲ್ಲಿ ಈ ದೇಶಗಳಲ್ಲಿ ಎಂಥ ರಾಜ್ಯವಿತ್ತು? ಪ್ರಜಾತಂತ್ರವೆ, ಸರ್ವಾಧಿಕಾರವೆ? ಬಹಿರಂಗವಾಗಿಯೆ ಸರ್ವಾಧಿಕಾರ ಸ್ಥಾಪಿತವಾಗಿತ್ತು. ಅಕಸ್ಮಾತ್ತಾಗಿ ಹಾಗೆ ಆಗಲಿಲ್ಲ. ಹಾಗೆ ಆಗಲೇಬೇಕಿತ್ತು. ಈ ದೇಶಗಳಲ್ಲಿ ಉತ್ಪಾದನಾವಿಧಾನ ಕೇಂದ್ರಿತವಾದುದು. ಕೇಂದ್ರೀಯ ನಿಯಂತ್ರಣ, ಸೈನಿಕತೆ, ಅದರ ಅನಿವಾರ್ಯ ಪರಿಣಾಮ. ಅದರಿಂದ ಸರ್ವಾಧಿಕಾರ ಬಂದೇ ತೀರಬೇಕು. ಆರ್ಥಿಕ ಕ್ಷೇತ್ರದಲ್ಲಿ ಸರ್ವಸಾಮ್ಯ, ರಾಜಕೀಯದಲ್ಲಿ ಮಾತ್ರ ಪ್ರಜಾಧಿಕಾರ ಸಾಧ್ಯವಿಲ್ಲ. ಇದು ಹುಲಿ–ಮೇಕೆಯ ನ್ಯಾಯ. ಇಂಥ ಪ್ರಜಾಧಿಕಾರ ಬರೀ ಕಪಟ. ಆರ್ಥಿಕ ಕ್ಷೇತ್ರದಲ್ಲಿ ಪ್ರಜಾತಂತ್ರ ಬರಬೇಕೆಂದರೆ ಹಳ್ಳಿಗಳಲ್ಲಿ ವೈಯಕ್ತಿಕ ಉತ್ಪಾದನೆಯ ಪದ್ಧತಿಯಿರಬೇಕು.

ನೀರಾವರಿ, ರಸ್ತೆ ಮುಂತಾದ ದೊಡ್ಡ ಕೆಲಸಗಳೂ ನಡೆಯಬೇಕಲ್ಲ, ಅದಕ್ಕೆ ಸಮಾಜದಲ್ಲಿ ದೀರ್ಘದೃಷ್ಟಿಯಿರುವವರನ್ನು ಆರಿಸಿ ನೇಮಿಸಬೇಕು. ಮಂತ್ರಿಗಳು, ಸರಕಾರಿ ಅಧಿಕಾರಿಗಳು ದೀರ್ಘದೃಷ್ಟಿಯುವರಾಗಬೇಕು. 'ಎಷ್ಟು ಲಾಭ ಬರುತ್ತದೆ?' ಎಂದು ಕೇಳುವವರು ಆ ಜವಾಬದಾರಿ ಸ್ಥಾನಗಳಿಗೆ ತಕ್ಕವರಲ್ಲ. ದೀರ್ಘದೃಷ್ಟಿಗೆ 'ಲಾಭವೆಷ್ಟು?' ಎಂಬುದಲ್ಲ ಅಳತೆ. ಜನತೆಯ ಅಗತ್ಯಗಳನ್ನು ತೃಪ್ತಿಗೊಳಿಸುತ್ತದೆಯೋ ಎಂಬುದು ಹಾಕಬೇಕಾದ ಪ್ರಶ್ನೆ. ಸರಕಾರ ವ್ಯಾಪಾರಿ ಸಂಸ್ಥೆಯಲ್ಲ : ಹಣ ಮಾಡುವ ಸಂಸ್ಥೆಯೂ ಅಲ್ಲ, ಅಧಿಕಾರಿ ವರ್ಗದ ಕಾರಖಾನೆಯೂ ಅಲ್ಲ. ಸರಕಾರ ಇರುವುದು ಜನಸೇವೆಗಾಗಿ. ಜನರ ಆವಶ್ಯಕತೆಗಳನ್ನು ಪೂರ್ಣಗೊಳಿಸಿದರೆ, ಎಷ್ಟು ವೆಚ್ಚವಾದರೂ ಸರಿಯೇ ಆ ಸೇವೆ ಸಲ್ಲಿಸಲೇಬೇಕಲ್ಲ. ಇದು ಮುಖ್ಯ ತತ್ವ. ಇದನ್ನು ನೆನಪಿಡಬೇಕು. ಖಾಸಗಿ ಹಣಕಾಸಿಗೂ ಸಾರ್ವಜನಿಕ (ರಾಷ್ಟ್ರೀಯ) ಹಣಕಾಸಿಗೂ ಇದೇ ಭೇದ. ಸಾರ್ವಜನಿಕ ಹಣಕಾಸಿನದು ದೀರ್ಘದೃಷ್ಟಿ. ಪ್ರಜಾತಂತ್ರಕ್ಕಾಗಿ ಯೋಜನೆ ಮಾಡುವಾಗ ಪ್ರತಿಯೊಬ್ಬ ವ್ಯಕ್ತಿಯೂ ಅದರಲ್ಲಿ ತನ್ನ ಪಾತ್ರವೇನೆಂಬುದನ್ನು ಅರಿಯುವಂತೆ ಮಾಡಬೇಕು.

ಕೆಲಸಗಾರರು : ಇದನ್ನು ಮಾಡುವಾಗ ಬಹಳ ಮುಖ್ಯವಾದುದು ಮಾಡುವ ಕೆಲಸಗಾರರಲ್ಲಿ 'ಸ್ವಾರ್ಥ' ಇರಬಾರದು ಎಂಬುದು. ಸ್ವಾರ್ಥವಿದ್ದರೆ ಲಕ್ಷಗಟ್ಟಲೆ ಜನರ ಶ್ರಮವನ್ನು ಅವರು ದುರುಪಯೋಗ ಪಡಿಸುತ್ತಾರೆ. ಅದೇ ಅಪಾಯ. ಇದಕ್ಕಾಗಿಯೆ ಕಾಂಗ್ರೆಸು ಮಂತ್ರಿ ಮಂಡಲಗಳಲ್ಲಿ ಅನೇಕ ವಿಷಯಗಳ ವೆಚ್ಚವನ್ನು ತಗ್ಗಿಸಬೇಕೆನ್ನುವುದು. ಹಿಂದಿನ ಮಂತ್ರಿಮಂಡಲಗಳು ೫೦೦ ರೂ. ಸಂಬಳ ತೆಗೆದುಕೊಂಡವು. ಈಗ ಅವರ ಮಟ್ಟ ಏರಿದೆ ; ಸಂಬಳವೂ ಹೆಚ್ಚಿದೆ. ಎಂದರೆ 'ಸ್ವಾರ್ಥ' ಬಂತು ಎಂತ. ಇಲ್ಲಿ ಅಪಾಯವಿದೆ. ನಾವು ಹಳ್ಳಿಯ ಜೀವನದ ಮಟ್ಟವನ್ನು

ಅನುಸರಿಸಬೇಕು. ಅರಮನೆಗಳಲ್ಲಿ ವಾಸಮಾಡಬಾರದು. ಪಟ್ಟಣಗಳಲ್ಲಿ ಶ್ರೀಮಂತರ ಅರಮನೆಗಳೆಷ್ಟೋ ಇವೆ. ಹಳ್ಳಿಗಳಲ್ಲಿ ಒಂದೂ ಇಲ್ಲ.

ಪಟ್ಟಣಕ್ಕೆ ಐದಾರು ಮೈಲಿ ದೂರದ ಒಂದು ಹಳ್ಳಿಯಲ್ಲಿ ಒಬ್ಬ ಪಾದರಿಯನ್ನು ಒಮ್ಮೆ ಕಂಡೆ. ನಮ್ಮ ಮಂತ್ರಿಗಳ ಮನೆ ಇದ್ದಹಾಗಿತ್ತು ಅವನ ಮನೆ : ಒಂದು ಅರಮನೆ. ಸೊಗಸಾದ ಅಲಂಕಾರ ಬೇರೆ. ಆ ಕಾಡಿನಲ್ಲಿ ವಿದ್ಯುತ್ತನ್ನು ಹಾಕಿಸಿದ್ದ. ಬಾವಿಗೆ ಪಂಪು, ಪಟ್ಟಣಗಳ ರೀತಿಯ ಸ್ವಚ್ಛವಾದ ಕಕ್ಕಸು, ಇನ್ನೂ ಆಧುನಿಕ ಸಲಕರಣೆಗಳು. ಸುಮಾರು ೩೦೦ ಎಕರೆ ಸೊಗಸಾದ ಭೂಮಿ ಬೇರೆ.

ಅಲ್ಲಿಗೆ ಅರ್ಧಮೈಲಿ ದೂರದಲ್ಲಿ ಕೆಲವು ಚಿಕ್ಕ ಚಿಕ್ಕ ಮಣ್ಣಿನ ಗುಡಿಸಲುಗಳನ್ನು ಕಟ್ಟಿಸಿದ್ದ–ಬಡಕುಟುಂಬಗಳಿಗಾಗಿ. ಒಂದೊಂದಕ್ಕೂ ಕೋಳಿ ಸಾಕಣೆಗೆ ಸ್ವಲ್ಪ ಸ್ಥಳ, ಬೇಸಾಯಕ್ಕೆ ಸ್ವಲ್ಪ ಹೊಲ ಬಿಟ್ಟಿದ್ದ. 'ಬೇಕಾದಷ್ಟು ಹಣ ಸುರಿಯುತ್ತಿದ್ದೇವೆ. ಆದರೆ ಹಳ್ಳಿಗಳಲ್ಲಿ ನಮ್ಮ ಕೆಲಸ ಪರಿಣಾಮಕಾರಿಯಾಗಿಲ್ಲ. ಜನ ನಮ್ಮ ಕೈಗೆ ಸಿಗುತ್ತಿಲ್ಲ. ಅದಕ್ಕೆ ಏನಾದರೂ ಒಂದು ಮಂತ್ರ ಹೇಳಿಕೊಡುತ್ತೀರಾ?' ಎಂದು ಆತ ನನ್ನನ್ನು ಕೇಳಿದ. 'ಅದಕ್ಕೇನು, ಬಹಳ ಸುಲಭವಾದ ಮಂತ್ರ ಇದೆ. ಈ ಅರಮನೆಗೆ ಮೊದಲು ಬೆಂಕಿಹಚ್ಚಿ : ಅದೇ ಮಂತ್ರ. ಪಶ್ಚಿಮ ದೇಶದಿಂದ ಬಂದಿದೀಯೆ. ಇಲ್ಲಿನ ಸ್ಥಿತಿಗತಿ ನಿನಗೆ ತಿಳಿಯದು. ನಿಮಗೆ ಸದಾ ಹಣದ ಚಿಂತೆ, ಅದರಿಂದ ಬರುವ ದೊಡ್ಡಸ್ಥಿಕೆಯ ಚಿಂತೆ. ಹಳ್ಳಿಯವರಿಗೆ ನಮ್ಮ ಈ ಉಡುಪನ್ನು ಕಂಡರೆ ಗೌರವ. ಪಂಚೆ ಎರಡು ಕಡೆ ಹರಿದಿದ್ದರೆ ಇನ್ನೂ ಹೆಚ್ಚು. ಮೈಮೇಲಿನ ಈ ಅಂಗಿಯನ್ನು ಕಿತ್ತೊಗೆದರೆ ನಮ್ಮ ಹಿಂದೆಯೆ ಬರುತ್ತಾರೆ. ಕೌಪೀನಧಾರಿಗಳಾದರೆ ನಮಸ್ಕಾರ ಮಾಡುತ್ತಾರೆ ! ಈ ದೇಶದ ಬೆಲೆ–ಅಳತೆ ಅದು. ನಿಮಗೆ ಈ ಸ್ಥಿತಿ ತಿಳಿಯದು. ನಮ್ಮ ಜನರ ಸೇವೆ ಮಾಡಬಯಸಿದರೆ ಮೊದಲು ಈ ಅರಮನೆಯನ್ನು ಬಿಡಬೇಕು. ಇದು ಶೋಷಣದ ಕುರುಹು. ಹಳ್ಳಿಯವರಿಗೆ ಇದರಿಂದ ಭಯ ಸಂದೇಹ ಹುಟ್ಟುತ್ತವೆ. ಅವರಿಗಾಗಿ ನೀವು ಕಟ್ಟಿರುವ ಈ ಗುಡಿಸಲುಗಳಿಗೆ ೨೫೦ ರೂ. ವೆಚ್ಚವಾದರೆ ನೀವು ೧೨೫ ರೂ. ಗೇ ಗುಡಿಸಲು ಕಟ್ಟಿಕೊಳ್ಳಬೇಕು. ಹೀಗಾದರೆ ನೀವು ಹಳ್ಳಿಯವರ ಸೇವೆ ಮಾಡೀರಿ. ಹಾಗೆ ಮಾಡಿದರೆ ನಿಮಗೆ 'ಸ್ವಾರ್ಥ' ವಿಲ್ಲ ಎಂದು ಅವರಿಗೆ ಮನದಟ್ಟಾಗಿ ನಿಮ್ಮ ಮಾತು ಕೇಳಲು ಬರುತ್ತಾರೆ. ಇದೇ ಆ ಗುಟ್ಟು. ನಮ್ಮ ದೇಶ ಅನಾಗರಿಕ ದೇಶವಲ್ಲ. ನಮಗೆ ಒಂದು ಸಂಸ್ಕೃತಿಯಿದೆ. ಹಣವಲ್ಲ ಅದರ ಆಧಾರ. 'ಬ್ರಾಹ್ಮಣ ಸಂಸ್ಕೃತಿ' ನಮ್ಮದು. ಜನಿವಾರವಲ್ಲ ಬ್ರಾಹ್ಮಣ ಸಂಸ್ಕೃತಿಯ ಗುರುತು. ಸಾವಿರಾರು ರೂಪಾಯಿ ಸಂಬಳ ತರುವ ದೊಡ್ಡ ಅಧಿಕಾರಿಗಳಿಗೆ ಜನಿವಾರವಿದ್ದರೂ ಅವರು ಬ್ರಾಹ್ಮಣರಲ್ಲ, ಮ್ಲೇಚ್ಛರು. ಗಾಂಧೀಜಿ ಅಮೆರಿಕಾಕ್ಕೆ ಹೋದರೆ ಕೊಟಗಟ್ಟಲೆ ಜನ ಸೇರಿ ಅವರನ್ನು ಸ್ವಾಗತಿಸುತ್ತಾರೆ.

ಆದರೆ ಭಾರತದ ಜನಕೋಟಿಯ ಭಾವನೆ ಅವರಲ್ಲಿಲ್ಲ. ನಮ್ಮ ಜನರಿಗೆ ಗಾಂಧೀಜಿ ಯಲ್ಲಿ ಭಕ್ತಿ ; ಏಕೆಂದರೆ, ಅವರಿಗೆ ಸೊತ್ತಿಲ್ಲ, ಸ್ವಂತದ್ದೇನೂ ಅಲ್ಲಿ. ಪ್ರಜಾಸರಕಾರ ಗಳಿಗೆ ನಿಜವಾದ ಅಧಿಕಾರ ತರುವುದು ಇದೇ. ಜನಗಳಲ್ಲಿ ವಿಶ್ವಾಸ ಮೂಡಿಸುವುದು ಇದೇ. ಈ ಯೋಜನೆ ಹಾಕಿ. ಜನ ಒಡನೆಯೆ ಒಪ್ಪುತ್ತಾರೆ. ಇದಕ್ಕೆ ಹಣವೂ ಹೆಚ್ಚು ಬೇಡ.

ನಮ್ಮನ್ನು ನಾವು ಪರಿವರ್ತಿಸಿಕೊಂಡು ಈ ಬಗೆಯ ಜೀವನ ಮಾರ್ಗವನ್ನು ಹಿಡಿದರೆ ಸಾಕು. ಇನ್ನೇನೂ ಬೇಡ. ಇದೇ ನಮಗೆ ಆರ್ಥಿಕ ಸ್ವರಾಜ್ಯವನ್ನು ಕೊಡುತ್ತದೆ. ಆ ಸ್ವರಾಜ್ಯದಲ್ಲಿ ಎಲ್ಲರಿಗೂ ಹೊಟ್ಟೆ ತುಂಬಾ ಅನ್ನ ಸಿಗುತ್ತದೆ.

ಬಡತನ ಇರುವ ದೇಶದಲ್ಲಿ ಮೊಟ್ಟಮೊದಲು ಎಲ್ಲರಿಗೂ ಅನ್ನ-ಬಟ್ಟೆ ಆಗ ಬೇಕು. ಆದುದರಿಂದ ನಮ್ಮ ಸಮಸ್ಯೆಗೆ ಉತ್ತರ ಬೇಸಾಯದಲ್ಲಿದೆ. ಜನರ ದೇಶ ಭಕ್ತಿಯನ್ನು ಪ್ರಚೋದಿಸಬೇಕಾಗಿಲ್ಲ. ಜನರ ಶ್ರಮಶಕ್ತಿಗೆ ಒಂದು ಅವಕಾಶ ಮಾಡಿ ಕೊಡಬೇಕು. ಪ್ರತಿಯೊಬ್ಬರಿಗೂ ಅನ್ನ-ಬಟ್ಟೆ ಒದಗಿಸಲೇ ಬೇಕು.

ಜಗತ್ತಿನ ಪ್ರತಿಕ್ರಿಯೆ : ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಇದೊಂದೇ ದಾರಿ. ಚೀನಾಕ್ಕೂ ನಮಗೂ ಬಹಳ ನಿಕಟ ಸಂಬಂಧವಿದೆ. ನಾವೇನು ಆಟಂಬಾಂಬು ಮಾಡುತ್ತೇವೆಯೆ ಈ ಸಂಬಂಧವಿರಲಿಕ್ಕೆ? ಬುದ್ಧ ಭಗವಾನ್ ನಿರ್ಮಿಸಿದ ಸಂಬಂಧ ಇದು. ನಮಗೆ ಬೇಕಾದುದು ಆ ಸಂಸ್ಕೃತಿ. ನಾವು ಜಗತ್ತಿನ ಒಂದು ಪ್ರಬಲ ರಾಷ್ಟ್ರವಾಗಬೇಕು. ಈ ಸಂಸ್ಕೃತಿಯ ತಳಹದಿಯ ಮೇಲೆ ಆ ಪ್ರಾಬಲ್ಯವನ್ನು ಕಟ್ಟ ಬೇಕು ನಾವು. ಅದಕ್ಕೆ ಹಳ್ಳಿಗಳನ್ನು ಮೊದಲು ಭದ್ರಗೊಳಿಸಿ ಮೇಲೇರಬೇಕು. ನಮ್ಮ ಸಮಸ್ಯೆಗಳೇ ಅಲ್ಲ, ಇಡೀ ಜಗತ್ತಿನ ಸಮಸ್ಯೆಗಳ ಪರಿಹಾರಕ್ಕೂ ಇದೊಂದೇ ದಾರಿ. ನಾಯಕತ್ವ ವಹಿಸಿಕೊಂಡವರು 'ಸ್ವಾರ್ಥ' ಬಿಡಬೇಕು. ಎಲ್ಲವನ್ನೂ ಬಿಡಬೇಕು. ಆಮೇಲೆ ಜನರ ಮುಂದೆ ಈ ಯೋಜನೆಯನ್ನು ಇಡಬೇಕು. ನಮ್ಮ ದೇಶಕ್ಕೆ ಅವರು ಸಲ್ಲಿಸಬಹುದಾದ ಕಾಣಿಕೆ ಇದೇ.

ಸರಕಾರದ ವಿರೋಧ : ಪ್ರತಿನಿಧಿಗಳ ದ್ವಾರಾ ನಡೆವ ಪ್ರಜಾ ಸರಕಾರದಲ್ಲಿ ಕೆಲಸ ನಡೆಯಲು ವಿರೋಧವಿರಬೇಕು. ದಡಗಳಿರುವುದರಿಂದ ಹೊಳೆಯ ನೀರು ಉಕ್ಕದೆ ಹರಿಯುತ್ತದೆ. ಕಲ್ಲಿನ ದಡಗಳಾದರೆ ಮತ್ತೂ ಕ್ಷೇಮ. ಇಲ್ಲದಿದ್ದರೆ ದಡ ಗಳನ್ನು ಕೊರೆಯುತ್ತದೆ ನೀರು. ನದಿಯಲ್ಲಿ ಮಣ್ಣು ತುಂಬಿ ಅದರ ಪಾತ್ರವೇ ಬದಲಾಗುತ್ತದೆ. ನದಿಯ ನೀರಿಗೂ ದಡಗಳಿಗೂ ಸ್ಪರ್ಧೆಯೇನಿಲ್ಲ.

ಅದೇ ರೀತಿ, ಆಡಳಿತ ನಡೆಸುವವರಿಗೂ ಉಳಿದವರಿಗೂ ಸ್ಪರ್ಧೆಯಿರಬಾರದು: ಸಹಕಾರವಿರಬೇಕು. ಒಂದೇ ರೀತಿ ಹರಿಯಲು ನದಿಗೆ ಕಲ್ಲು ದಡ ಅಗತ್ಯವಿದ್ದಂತೆ

ದೇಶದ ಸರಕಾರ ವ್ಯವಸ್ಥಿತವಾಗಿ ನಡೆಯಲು ಅಧಿಕಾರಿ ವರ್ಗಕ್ಕೆ ಸೇರದ ಬೇರೆ ಜನ ಅದಕ್ಕೆ ಮಾರ್ಗದರ್ಶನ ಮಾಡಬೇಕು. ಇಂಗ್ಲೆಂಡಿಗೆ ತನ್ನ 'ಪಾರ್ಲಿಮೆಂಟ್' ಎಂದರೆ ಬಹಳ ಹೆಮ್ಮೆ. ಸರಕಾರ ಮಾಡಬೇಕೆನ್ನುವ ಕೆಲಸಗಳ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಪ್ರಕಟಿಸಿ ಮಂತ್ರಿಮಂಡಲವನ್ನು ನಿಗ್ರಹಿಸುವುದು; ಅದಕ್ಕಾಗಿ ಸರಕಾರದ ವೆಚ್ಚದಿಂದ 'ಸರಕಾರದ ವಿರೋಧ ಪಕ್ಷ'ವನ್ನು ನಿರ್ಮಿಸುವುದು ಅವರ ಪದ್ಧತಿ. ರಾಜಕೀಯ ಯೋಧರು ದ್ವಂದ್ವ ಯುದ್ಧ ಮಾಡುವ ಮಲ್ಲರಂಗ ಆ ಪಾರ್ಲಿಮೆಂಟು. ಸೋತವನು ಗೆದ್ದವನಿಗೆ ಸ್ಥಾನ ಬಿಡುತ್ತಾನೆ. ಪಾರ್ಲಿಮೆಂಟಿನ ವಾದ-ವಿವಾದಗಳ ಭರಾಟೆಯ ಗಾಳಿಯಲ್ಲಿ ಇಂದು ವಿರೋಧ ಪಕ್ಷದಲ್ಲಿ ಕುಳಿತವರು ನಾಳೆ ಮಂತ್ರಿಮಂಡಲದಲ್ಲಿರಬಹುದು. ಬ್ರಿಟಿಷ್ ಪಾರ್ಲಿಮೆಂಟಿನ ವಿರೋಧ ಪಕ್ಷದ ಕೆಲಸ ಇದು. ಅವರ ಸ್ಪರ್ಧಾಮಯ ಆರ್ಥಿಕ ವಿಧಾನ ರಾಜಕೀಯದಲ್ಲಿಯೂ ಕಾಲು ಚಾಚಿ ಕುಳಿತಿದೆ.

ಮಂತ್ರಿಮಂಡಲದ ರಚನೆಯೇ ಆರ್ಥಿಕ ಕ್ಷೇತ್ರದಲ್ಲಿರುವ ಸಾಮ್ರಾಜ್ಯಶಾಹಿಯ ಕುರುಹು. ಕೇಂದ್ರಿಯ ಉದ್ಯೋಗಗಳಿಗೆ ನಾಲ್ಕೂ ಮೂಲೆಗಳಿಂದಲೂ ಕಚ್ಚಾ ಮಾಲು ಒದಗಬೇಕು. ಅವನ್ನು ಪೂರ್ಣ ಪದಾರ್ಥವಾಗಿ ಸಜ್ಜುಗೊಳಿಸಿ ಮತ್ತೆ ಇವರು ಜಗತ್ತಿನ ಮೂಲೆ ಮೂಲೆಗೂ ಕಳಿಸಬೇಕು. ಇದರಿಂದ ಹಣದ ಚಲಾವಣೆ, ಸಂಚಾರ ಸಾಧನಗಳು, ರಾಜಕೀಯಾಧಿಕಾರ ಅಗತ್ಯವಾಗುತ್ತವೆ. ಇದನ್ನು ಸಾಧಿಸಲು ಪರರಾಷ್ಟ್ರಗಳ ರಾಜಕೀಯ, ಹಣಕಾಸು, ಸೈನ್ಯ, ನೌಕೆ, ವಿಮಾನದಳ ಬಹಳ ಅವಶ್ಯಕವಾಗುತ್ತವೆ. ಆದುದರಿಂದ ಮಂತ್ರಿಮಂಡಲದಲ್ಲಿ ಆ ಶಾಖೆಗಳೇ ಬಹಳ ಮುಖ್ಯ.

ಸ್ಪರ್ಧೆ, ಸಾಮ್ರಾಜ್ಯವಾದ – ಎರಡಕ್ಕೂ ಹಿಂಸೆಯೇ ತಳಹದಿ.

ನಮ್ಮ ದೇಶ ಆಡಳಿತವನ್ನು ವಹಿಸಿಕೊಂಡಿದೆ. ನಾವು ಅಹಿಂಸೆಯನ್ನು ಅವಲಂಬಿಸುವುದಾದರೆ ನಮ್ಮ ರಾಜ್ಯದ ರಚನೆ ಹೇಗಿರಬೇಕು? ನಮ್ಮ ಸರಕಾರಕ್ಕೂ ತಪ್ಪಿದಲ್ಲಿ ತಡೆದು ತಿದ್ದುವ 'ವಿರೋಧ'ವೊಂದು ಬೇಕಲ್ಲ. ಆದರೆ ನಮಗೆ ಸ್ಪರ್ಧೆ ಬೇಡ, ಸಹಕಾರದ ಆರ್ಥಿಕ ರಚನೆಬೇಕು. ನಮ್ಮ 'ವಿರೋಧ' ಪಕ್ಷದ ಸದಸ್ಯರು ಅಧಿಕಾರ ತಮ್ಮ ಪಾಲಿಗೆ ಎಂದು ಬಂದೀತು ಎಂದು ಹಾತೊರೆಯುತ್ತ ಕೂಡರು. ಅಹಿಂಸೆ – ಸಹಕಾರಗಳ ಆರ್ಥಿಕ ವಿಧಾನದಲ್ಲಿ ವೈಯಕ್ತಿಕ ಆಕಾಂಕ್ಷೆಗಳಿಗೆ ಎಡೆಯಿಲ್ಲ. ಮಂತ್ರಿಗಳನ್ನು ಕೆಳಗಿಳಿಸಿ ನಾವು ಅಲ್ಲಿಗೆ ಹೋಗಬೇಕು ಎಂಬುದಲ್ಲ ನಮ್ಮ ಧ್ಯೇಯ; ಮಂತ್ರಿಗಳು ನಮ್ಮನ್ನು ನೋಡಿ ನಡತೆಯನ್ನು ಕಲಿಯಲಿ ಎನ್ನುವ ಆದರ್ಶ ವ್ಯಕ್ತಿತ್ವ. ರಚನಾತ್ಮಕ ಕೆಲಸಗಾರರು ತಮ್ಮ ದೃಷ್ಟಾಂತ ಬಲದಿಂದ ಸರಕಾರ ಸರಿಯಾಗಿ ನಡೆಯು

ವಂತೆ ಮಾಡಬೇಕು. ಅಹಿಂಸಾತ್ಮಕ ಆರ್ಥಿಕವ್ಯವಸ್ಥೆಯಲ್ಲಿ ರಚನಾತ್ಮಕ ಕೆಲಸಗಾರರಿಗೆ ಈ ಮಹತ್ತರ ಜವಾಬದಾರಿ ಬರುತ್ತದೆ.

ಈ ರೀತಿ ಮಾರ್ಗದರ್ಶನ ಮಾಡಲು ರಚನಾತ್ಮಕ ಕೆಲಸಗಾರರದೊಂದು ಸುಸಂಘಟಿತ ಮಂಡಳಿ ಅಗತ್ಯ. ಅವರು ಮಾಡಿದ ಜನ ಸೇವೆಯೇ ಅವರ ಬಲ. ಅವರ ಕೆಲಸದ ಉತ್ತಮ ಗುಣವೇ ಅವರ ಅಧಿಕಾರ. ಇಂಥ ಮಂಡಲಿಯಿದ್ದರೆ ಮಂತ್ರಿಗಳು ಅವರಿಂದ ಸ್ಫೂರ್ತಿ ಪಡೆದಾರು. ಈ ಮಂಡಲಿ ಅವರಿಗೆ ಸೂಚನೆ – ಸಲಹೆ ಕೊಟ್ಟೀತು. ಇಂಥ ಜವಾಬುದಾರಿಯ ಕೆಲಸವನ್ನು ನಡೆಸಲು ಈ ಗುಂಪಿನಲ್ಲಿ ತ್ಯಾಗಮಯರೂ ಅನಾಸಕ್ತರೂ ಜನಸೇವೆ – ಲೋಕಸಂಗ್ರಹವೊಂದೇ ತಮ್ಮ ಗುರಿ ಆದವರೂ ಇರಬೇಕು.

ಇಂಥ ರಾಜಕೀಯ ರಚನೆಯ ಮಂತ್ರಿಗಳು ಸ್ವಾವಲಂಬನದ ಆರ್ಥಿಕ ವಿಧಾನಕ್ಕೆ ಮುಖ್ಯವಾದ ಶಾಖೆಗಳನ್ನು ವಹಿಸಿಕೊಂಡಾರು. ಆಗ ಆಡಳಿತ ಶಾಖೆಗಳಲ್ಲಿ – ಕೃಷಿ, ಭೂಸುಧಾರಣೆ, ಭೂಸಾರ ನಷ್ಟಕ್ಕೆ ತಡೆ, ಹೊಸದಾಗಿ ಭೂಮಿಯನ್ನು ಕೃಷಿಯೋಗ್ಯವಾಗಿ ಮಾಡುವುದು, ನೀರಾವರಿ, ನದಿಗಳ ಯೋಜಮಾನ್ಯ, ಕಾಡು, ಗ್ರಾಮೋದ್ಯೋಗ, ಖನಿಜ – ಭಾರಿ ಉದ್ಯೋಗಗಳು, ಆರೋಗ್ಯ, ಶಿಕ್ಷಣ ಗೃಹಶಾಖೆಗಳು ಮುಖ್ಯವಾಗುತ್ತವೆ. ಪರರಾಷ್ಟ್ರ ನೀತಿ, ಅರ್ಥ ರಕ್ಷಣೆಗಳಿಗೆ ಮಂತ್ರಿ ಮಂಡಲದಲ್ಲಿ ಸ್ಥಾನವನ್ನು ಕೊಡಬೇಕಾಗಿಯೇ ಇಲ್ಲ.

ಈ ಬಗೆಯ ರಾಜಕೀಯ ಸ್ವರೂಪದಲ್ಲಿ ಜನತೆಯನ್ನು ಶೋಷಣಕ್ಕೆ ತುತ್ತಾಗದಂತೆ ತಡೆಯಲು ಈ ರಚನಾತ್ಮಕ ಕೆಲಸಗಾರರ ಗುಂಪು ರಕ್ಷಾ ಕವಚವಾಗಿ ಇರುತ್ತದೆ. ಈ ಪ್ರಕಾರ ನಡೆದ ಸಹಕಾರ ಜನತೆಯ ವ್ಯವಹಾರಕ್ಕೆ ಪ್ರಾಧಾನ್ಯ ಕೊಟ್ಟು ಜನರ ಯೋಗಕ್ಷೇಮವನ್ನು ಸಾಧಿಸುತ್ತದೆ.

'ರಾಷ್ಟ್ರೀಯಕರಣ' ಎಂದರೆ ರಾಷ್ಟ್ರ ಜನತೆಯ ಕೈಯಲ್ಲಿದೆ ಎಂದು ಅರ್ಥ. ಇದಕ್ಕೆ ಮೊದಲನೆ ಮೆಟ್ಟಿಲಾಗಿ ನಮ್ಮ ವ್ಯವಹಾರ ನಿರ್ವಹಣದಲ್ಲಿ ಅನುಭವ ವಿಸ್ತಾರವಾಗಿ ಸಿಗಬೇಕು. ಹಳ್ಳಿಗಳಲ್ಲಿ ಚೆನ್ನಾಗಿ ಸಂಘಟಿಸಿದ ಪಂಚಾಯತಿಗಳ ಮೂಲಕ ಜನರು ತಮ್ಮ ತಮ್ಮ ಅವಶ್ಯಕತೆಗಳನ್ನು ತಾವೇ ಪೂರಯಿಸಿಕೊಳ್ಳಬೇಕು. ಹೀಗೆ ಅನುಭವ ಪಡೆದ ಜನರ ಗುಂಪಿನಿಂದ ಜಿಲ್ಲೆಗಳು ತಮ್ಮ ಆಡಳಿತಗಾರರನ್ನು ಆರಿಸಿಕೊಳ್ಳುತ್ತವೆ. ಇಡೀ ಪ್ರಾಂತದ ಆಡಳಿತಕ್ಕೆ, ವಿಧಾನ ಸಭೆಗೆ ಬೇಕಾದ ಜನರನ್ನು ಈ ಗುಂಪು ನೀಡಬಲ್ಲದು. ಹೀಗೆ ಸುವ್ಯವಸ್ಥಿತವಾಗಿ ದೃಢ ಆಧಾರದ ಮೇಲೆ ಪ್ರಾಂತದ ಆಡಳಿತವನ್ನು ರಚಿಸಿದರೆ ಕೇಂದ್ರವನ್ನೂ ನಿಗ್ರಹಿಸಿ, ಗ್ರಾಮಸ್ಥರ ಹಿತಕ್ಕಾಗಿ ಅದು ದುಡಿಯುವಂತೆ ಮಾಡಬಹುದು.

ಇಂಥ ಅನುಭವಿ ದೇಶಭಕ್ತರ ಕೈಯಲ್ಲಿ ಆಡಳಿತವಿದ್ದರೆ, ಜನತೆಯ ಯೋಗ

ಕ್ಷೇಮವೇ ಅವರ ಅಗ್ರ ಧರ್ಮ ಎಂಬ ವಿಶ್ವಾಸ ಜನರಿಗಿದ್ದರೆ, ಅದು ರಾಷ್ಟ್ರೀಯ ಸರಕಾರ. ಆಗ ರಾಷ್ಟ್ರೀಯಕರಣ ಮಾಡಿದರೂ ಜನತೆಯ ಹಿತಕ್ಕೆ ಆತಂಕವಿರದು.

ಈ ಬಗೆಯ ಗ್ರಾಮಗಳ ತಳಹದಿಯ ಮೇಲೆ ಕಟ್ಟಿದ, ಗ್ರಾಮಗಳಿಂದ ನಿಗ್ರಹಿತವಾದ, ಕೇಂದ್ರ ಸರಕಾರವಿಲ್ಲದಿದ್ದರೆ ಬರೀ 'ರಾಷ್ಟ್ರೀಯಕರಣ' ದಿಂದ ಬಡವರು ಭಾಗ್ಯವಂತರಿಂದ ಶೋಷಣೆಗೆ ಮತ್ತಷ್ಟು ಬಲಿಯಾದಾರು.★

ನೆಲದ ಶಕ್ತಿಯ ಸಾಧನೆ .... **೪ನೇ ಪುಟದಿಂದ**

ತಂದುಕೊಡುವ ಮಾರ್ಗ ತೋರಿಸಿಕೊಟ್ಟರು. ಮಾನವನಿಗೆ ಅವನ ಸ್ವವ್ಯಕ್ತಿತ್ವ ಮೂಲದ 'ಪ್ರಭೆ'ಯನ್ನು ಮರಳಿ ಗಳಿಸಿಕೊಟ್ಟರು.

ಖ್ಯಾತ ಬರಹಗಾರ ಬೆಂಜಮಿನ್ ಹೇಳುವಂತೆ ಈ ಯುಗ ಯಾಂತ್ರೀಕೃತ ಪುನರ್‌ಸೃಷ್ಟಿಯ ಯುಗ. ವ್ಯಕಿಗಳ, ವಸ್ತುಗಳ, ಕಲಾಕೃತಿಗಳ 'ಪ್ರಭೆ'ಯನ್ನು ನಾಶಮಾಡುತ್ತದೆ. ಹಿಂದೆ ಜಗತ್ತಿನಲ್ಲಿ ಏಕಮೇವವಾಗಿದ್ದ, ಏಕಮಾತ್ರವಾಗಿದ್ದ 'ಮೋನಾ ಲೀಸಾ' ಚಿತ್ರವನ್ನು ಈಗ ಲಕ್ಷಗಟ್ಟಲೆ ಪ್ರತಿ ಮಾಡಿ ಬಿಸುಡಬಲ್ಲ ಈ ಯಂತ್ರನಿಯಂತ್ರಿತ ಯುಗ 'ಮೋನಾ ಲೀಸಾ'ವನ್ನು ಅಲ್ಲ, ಅದರ ಪ್ರತಿಯನ್ನು ನಮ್ಮ ಮನೆಯ ಡ್ರಾಯಿಂಗ್ ರೂಮಿಗೆ, ಕಚೇರಿಗೆ, ಕೊನೆಗೆ ನಮ್ಮ ಬಾತ್ ರೂಮ್‌ಗೂ ತಂದು ಮುಟ್ಟಿಸಿಬಿಡುತ್ತದೆ; ಈ ಇಡೀ ಪ್ರಕ್ರಿಯೆಯಲ್ಲಿ 'ಮೋನಾ ಲೀಸಾ' ಮೂಲಚಿತ್ರ ಏಕಮಾತ್ರವಾಗಿದ್ದಾಗ ಅದು ಪಡೆದುಕೊಂಡಿದ್ದ ಪರಂಪರೆಯ ಅಧಿಕಾರವನ್ನು, ಅದರೊಟ್ಟಿಗೆ ಅದರ ದೈವಿಕ ಪ್ರಭೆಯನ್ನು ನಾಶ ಮಾಡಿಬಿಡುತ್ತದೆ. ಆದರೆ ಮನುಷ್ಯನ ಇನ್ನೊಂದು ಆಳದ ಪ್ರೇರಣೆಯೂ ಇದೆಯಲ್ಲ ಮತ್ತೆ ತನ್ನ ಆಳದ ತೃಪ್ತಿಗಾಗಿ ಹೊಸ ಪ್ರಭೆಯೊಂದನ್ನು ಕಟ್ಟಿಕೊಳ್ಳಲು, ಕಂಡುಕೊಳ್ಳಲು ಹಂಬಲಿಸುವುದು. ಇದು ಆತನನ್ನು ಮತ್ತೆ ಸೃಜನ ಶೀಲತೆಯ ದಾರಿಗೆ ಹಚ್ಚುತ್ತದೆ. ಈ ಒಡೆಯುವ ಮತ್ತೆ ಕಟ್ಟುವ ಜೀವಂತ ಪ್ರಕ್ರಿಯೆ ಮುಂದುವರಿಯುತ್ತದೆ.

ಈಗ ನಮ್ಮದೇ ನೆಲದ ಶಕ್ತಿಗಳನ್ನು, ಸಾಧ್ಯತೆಗಳನ್ನು ಪುನಃ ಕಂಡುಕೊಳ್ಳುವ ಸ್ಥಿತಿಯಲ್ಲಿ ನಾವಿದ್ದೇವೆ. ಪಶ್ಚಿಮದ ರಾವಿನಿಂದ ಬಿಡಿಸಿಕೊಳ್ಳಲೇಬೇಕಾದ ಅನಿವಾರ್ಯ ಹಂತದಲ್ಲಿದ್ದೇವೆ. ಇಂತಹ ಸಂದರ್ಭದಲ್ಲಿ ಕನ್ನಡದ ಕಲೆ. ಸಂಸ್ಕೃತಿಯನ್ನು ಗಾಢಗೊಳಿಸಿಕೊಳ್ಳುವುದು ಹೇಗೆ, ಅದನ್ನು ಸ್ವೀಕರಿಸುವಂಥ ಸಹೃದಯರನ್ನು ಸೃಷ್ಟಿಸಿಕೊಳ್ಳುವುದು ಹೇಗೆ ಅನ್ನುವ ಹುಡುಕಾಟವಲ್ಲಿ ಈ ಶಿಬಿರದಂತಹ ಪ್ರಯತ್ನಗಳು ನಡೆಯುತ್ತಿರುತ್ತವೆ.★

(**ಕೃಪೆ : 'ಮಾತುಕತೆ'** ನವೆಂಬರ್ ೯೦. ನೀನಾಸಂ, ಹೆಗ್ಗೋಡು, ಪ್ರಕಟಣೆ.)

ಘಟ ಭಾಂಡೇಶ್ವರ

— ಬಾಗಲೋಡಿ ದೇವರಾಯ

(ಬಾಗಲೋಡಿ ದೇವರಾಯರು ಈ ಶತಮಾನದ ಮಧ್ಯಭಾಗದಲ್ಲಿ ಯಶಸ್ವಿ ಕಥೆಗಾರರಾಗಿದ್ದರು. ವಿದೇಶಾಂಗ ಇಲಾಖೆಯಲ್ಲಿ ಸೇವೆಸಲ್ಲಿಸಿದ ದೇವರಾಯರು ನಿವೃತ್ತರಾದ ಬಳಿಕ ಕನ್ನಡ ಸಾರಸ್ವತ ಲೋಕ ಪ್ರವೇಶಿಸಿದ್ದರು. ತಮ್ಮ ಅನುಭವ ಬರೆಯಬೇಕೆಂದು ಹಂಬಲಿಸುತ್ತಿದ್ದಾಗಲೇ ವಿಧಿ ವಶರಾದರು.

ಚರಿತ್ರೆಯನ್ನು ಸೃಷ್ಟಿಸುವ ವ್ಯಂಗ್ಯವನ್ನು ಸಮರ್ಥವಾಗಿ ರೂಪಿಸುತ್ತದೆ. 'ಘಟ ಭಾಂಡೇಶ್ವರ' ಕಥೆಯ ಪ್ರಸ್ತುತತೆ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲವೇನೋ. —ಸಂ.)

ಒಕೆಂದ್ರಪ್ಪ ಕುಂಬಾರನಿಗೆ ಬಹು ಕೋಪ ಬಂದಿತ್ತು. "ಎಲ್ಲಿ ಮಾಯವಾಗಿದ್ದಾನೆ ನಿನ್ನ ಮಗ? ಕೆಲಸ ಮುಗಿದ ನಂತರ ಒಂದು ಕ್ಷಣ ಮನೆಯಲ್ಲಿ ಇರಲಾರ. ಶುದ್ಧ ತಿರುಗೂಳಿ. ಒಬ್ಬನೇ ಮಗನನ್ನು ಹೆತ್ತೆ. ಅವನನ್ನೂ ಕಟ್ಟುನಿಟ್ಟಾಗಿ ಇರಿಸಲು ನಿನಗೆ ಕೈಲಾಗದೇ? ನಿನ್ನ ಮುದ್ದಾಟ ಬಹಳ ಹೆಚ್ಚಾಯಿತು. ಶುದ್ಧ ಅಯೋಗ್ಯ ಸ್ವೇಚ್ಛಾಚಾರಿಯಾಗಿ ಬೆಳೆಸಿದ್ದೀ.........."

ಹೆಂಡತಿ ಪೂವಮ್ಮ : "ನೀವು ಸುಮ್ಮನೆ ಏಕೆ ಅರ್ಭಟಿಸುತ್ತಿದ್ದೀರಿ? ನೀವೇ ಹೇಳಿದಿರಿ, ದಿನದ ಕೆಲಸವನ್ನೆಲ್ಲಾ ಮುಗಿಸಿದ್ದಾನೆ ಎಂದು. ಎಷ್ಟೋ ಬಾರಿ ನೀವೇ ಅಂದಿದ್ದೀರಿ, ಗಡಿಗೆ ಮಾಡುವುದರಲ್ಲಿ ಇಷ್ಟು ಸಣ್ಣ ಪ್ರಾಯದಲ್ಲೇ ಅವನಿಗೆ ಪಳಗಿದ ಕೈ ಎಂದು. ಅವನು ಜಾಣನೆಂದು ನೀವೇ ಹಿಗ್ಗಿದ್ದೀರಿ. ಕೆಲಸ ಮುಗಿಸಿದ ಮೇಲೂ ಮನೆಯಲ್ಲೇ ಇರಬೇಕು ಎಂದರೆ ಅವನೇನು ಬಂದಿವಾನನೇ? ಮಕ್ಕಳು ಸಣ್ಣ ಪ್ರಾಯದಲ್ಲಿ ಓಡಾಡಿ ತಿರುಗಾಡುವುದೇನು ತಪ್ಪು? ವೃದ್ಧಾಪ್ಯದಲ್ಲಿ ಹಲ್ಲು ಉದುರಿದ ನಂತರ ಓಡಾಡಬೇಕೇ? ದೇವರು ನಮಗೆ ಚಿನ್ನದಂಥಾ ಮಗನನ್ನು ದಯಪಾಲಿಸಿದ್ದಾನೆ. ನೀವು ಅನ್ಯಾಯವಾಗಿ ಶಪಿಸುತ್ತಿದ್ದೀರಿ."

"ತಿಳಿಯಿತು. ಇದೆಲ್ಲಾ ನಿನ್ನದೇ ದುರ್ಬುದ್ಧಿಯ ಫಲ. ಹೆಂಗಸರ ಅವಿವೇಕ. ಮನೆಗೆ ಒಬ್ಬನೇ ಮಗ. ನಮ್ಮದು ಹಳೆಯ ಮನೆತನ. ಗುರಿಕಾರರ ಮನೆತನ. ನೂರು ಗ್ರಾಮಗಳಲ್ಲಿ ನಮಗೆ ಮರ್ಯಾದೆಯಿದೆ. ನಮ್ಮ ಕುಂಬಾರ ಸಾಲೆಯ ಗಡಿಗೆ ಹಂಡೆಗಳು ಚಿನ್ನ ಬೆಳ್ಳಿಯ ಪಾತ್ರೆಗಳಿಗೆ ಸಮಾನ ಎಂದು ಮನ್ನಣೆಯಿದೆ. ಬೀಡಿನ ಬಲ್ಲಾಳರಿಗೂ, ಮೂಲ್ಕಿಯ ಸಾವಂತರಿಗೂ, ಅಳದಂಗಡಿಯ ಅಜಿಲರಿಗೂ, ಕಾರ್ಕಳದ ಭೈರರಿಗೂ, ಉಳ್ಳಾಲದ ಚಾಟರಿಗೂ ಈ ಮನೆಯಿಂದೇ ಗಡಿಗೆ ಹಂಡೆಗಳ ಸರಬರಾಜು. ಇದು ನಮ್ಮ ಪರಂಪರೆ. ಈ ಚಿನ್ನದ ಕಡಗ ನನಗೆ ಹೇಗೆ ಲಭಿಸಿತು?

ಸೊನ್ನೆಕಾರನ ಅಂಗಡಿಯಿಂದಲ್ಲ; ಉದ್ಯಾವರದ ಕದಂಬ ರಾಜರಿಂದಲೇ ಬಂದುದು. ದೊರೆಗಳು ಕಾಯಿಲೆ ಬಿದ್ದಾಗ ರಾಜವೈದ್ಯರು ಕುದಿಸಿದ ನೀರನ್ನೂ ಮಜ್ಜಿಗೆಯನ್ನೂ ಗಡಿಗೆಯಲ್ಲಿಟ್ಟು ತಣಿಸಿ ಕುಡಿಯಬೇಕೆಂದೂ ಆ ಗಡಿಗೆಗಳು ನನ್ನ ಕುಂಬಾರ ಸಾಲೆಯದೇ ಆಗಿರಬೇಕೆಂದೂ ವಿಧಿಸಿದ್ದು ನಿನಗೆ ಮರೆತುಹೋಯಿತೇ? ನಮ್ಮ ಕುಲಕ್ಕೆ ದೊಡ್ಡ ಕೀರ್ತಿಯಿದೆ. ದಿವಸದ ಕೆಲಸ ಮುಗಿದ ಕೂಡಲೇ ಪಲಾಯನ ಮಾಡಿದರೆ ಕೈಯ ಕೌಶಲ್ಯ ಉಳಿದೀತೇ? ನಮ್ಮ ವೃತ್ತಿ ಸುಲಭವಲ್ಲ, ಸಾಧನೆ ಬೇಕು. ಹೇಳು, ಎಲ್ಲಿಗೆ ಹೋಗಿದ್ದಾನೆ ತಿರುಗೂಳಿ? ನೆರೆಮನೆಗಳಲ್ಲೆಲ್ಲಾ ವಿಚಾರಿಸಿದೆ. ಅಲ್ಲೆಲ್ಲೂ ಇಲ್ಲ. ಎಲ್ಲಿದ್ದಾನೆ? ಕೋಳಿ ಕಟ್ಟದಲ್ಲೋ? ಜೂಜಿನ ಅಂಗಡಿಯಲ್ಲೋ? ಹೆಂಡದಂಗಡಿಯಲ್ಲೋ?"

ಪೂವಮ್ಮ, "ಅಯ್ಯೋ ಏನು ಹಾಳುಬಾಯಿ ನಿಮ್ಮದು, ಅಪಶಕುನದ ಮಾತುಗಳನ್ನೇಕೆ ಹೇಳುತ್ತಿದ್ದೀರಿ? ನಿಮ್ಮ ಮಗ ಅಂಥವನೇ? ಅವನ ಗುಣ ನಿಮಗೆ ತಿಳಿಯದೇ? ಬಹುಶಃ ಧರಣಯ್ಯನವರ ಮನೆಗೆ ಹೋಗಿರಬೇಕು. ಅಲ್ಲಿಗೆ ಹೋಗುವುದೆಂದರೆ ಅವನಿಗೆ ಬಹಳ ಇಷ್ಟ" ಎಂದಳು.

"ಹಾರವರ ಮನೆಗೆ ಆತ ಏಕೆ ಹೋಗುತ್ತಾನೆ? ಅಲ್ಲೇನು ಅವನಿಗೆ ಕೆಲಸ? ಬ್ರಾಹ್ಮಣರ ಭಕ್ಷ್ಯದ ರುಚಿ ನಾಟಿತೇ? ಆ ಹಾರವಯ್ಯ ಬುದ್ಧಿವಂತ. ಒಂದು ಬೆಲ್ಲದ ಮೋದಕವನ್ನು ತಿನ್ನಿಸಿ ಹಿತ್ತಿಲ–ಮರಗಳಿಗೆಲ್ಲಾ ನೀರು ಹೊಯ್ಯುವ ಬಿಟ್ಟಿ ಮಾಡಿಸಿಯಾನು. ದನಕರುಗಳ ಮೈ ತೊಳೆಸಿಯಾನು. ಕುಂಬಾರರ ಗುರಿಕಾರರ ಮಗ ಹಾರವನ ಮನೆಯ ಬಿಟ್ಟಿಯ ಆಳಲ್ಲ. ಸರಿ, ಈ ರೋಗಕ್ಕೆ ಮದ್ದು ನಾನೇ ಅರೆಯಬೇಕು" ಎಂದು ಗುಡುಗುಡಿಸುತ್ತಾ ಗರ್ಜಿಸುತ್ತಾ ಧರಣೇಂದ್ರಯ್ಯನ ಮನೆ ತಲುಪಿದನು,

ಧರಣೇಂದ್ರಯ್ಯನ ಮನೆ ಪುರಾತನ ಕಾಲದ ಸಾಂಪ್ರದಾಯಿಕ ತರದ ಮನೆ. ಉನ್ನತವಾದ ಪ್ರಾಕಾರಗಳು. ಒಂದು ಹೊರ ಅಂಗಳ, ಮತ್ತೊಂದು ಒಳ ಅಂಗಳ. ನಡುವಿನಲ್ಲಿ ದೊಡ್ಡಮನೆ. ಹಿಂದೆ ವಿಶಾಲವಾದ ತೋಟ.

ಗುರಿಕಾರ ಕೋಪವಿದ್ದರೂ ನುಂಗಿಕೊಂಡು ಕ್ರಮದಂತೆ ಔಪಚಾರಿಕವಾಗಿ ಕೈ ಜೋಡಿಸಿದ.

"ಏನು ಗುರಿಕಾರ? ಸೌಖ್ಯವೇ? ದೂರು?"

"ಏನೂ ಇಲ್ಲ. ನಮ್ಮ ಹುಡುಗ ಐತು ಇಲ್ಲಿಗೆ ಬಂದಿರಬಹುದೆಂದು ಪೂವಮ್ಮ ಹೇಳಿದಳು. ಏನು ಮಾಡುತ್ತಿದ್ದಾನೆ. ತಿರುಗೂಳಿ? ಅವನಿಂದೇನು ನೀವು ಬಿಟ್ಟಿ ಕೆಲಸ ಮಾಡಿಸುತ್ತಿದ್ದೀರೇ?"

ಧರಣಯ್ಯನಿಗೆ ಒಂದು ಕ್ಷಣ ಕೋಪ ಕುದುರಿತು. ಮತ್ತೆ ಸಂಯಮಿಸಿ ಕೊಂಡನು. ಕುಂಬಾರನಿಗೆ ರೋಷ ಬಂದುದನ್ನು ಗಮನಿಸಿ ತಾಳ್ಮೆಯಿಂದಲೂ ಸ್ವಲ್ಪ ವ್ಯಂಗ್ಯವಾಗಿಯೂ ಬಹುವಚನ ಪ್ರಯೋಗಿಸಿ:

"ಗುರಿಕಾರರೇ, ದಯಮಾಡಿಸಿ. ತಮ್ಮ ಸುಪುತ್ರ ಎಂತಹ ಬಿಟ್ಟಿಕೆಲಸ ಮಾಡುತ್ತಿದ್ದಾನೆಂದು ಕಣ್ಣಾರೆ ನೋಡಿ" ಎಂದು ಹೊರ ಅಂಗಳ ಹಿಂದಿನ ತೋಟಕ್ಕೆ ಕರೆದುಕೊಂಡು ಹೋದನು.

ಅಲ್ಲಿ ಮೂವರು ಹುಡುಗರು ಕುಳಿತಿದ್ದರು. ಅವರ ಮುಂದೆ ಹೊಯಿಗೆಯನ್ನು ಹಸನಾಗಿ ಮಾಡಿ ಇಟ್ಟಿದ್ದರು. ಪಕ್ಕದಲ್ಲೇ ಓಲೆಯ ಗರಿಯ ಪುಸ್ತಕಗಳು ಮತ್ತು ಕಂಟಕ ವರ್ಣಿಕೆ.

ಮೂವರು ಹುಡುಗರೂ ಏಕಾಗ್ರಚಿತ್ತರಾಗಿ ಅಕ್ಷರಾಭ್ಯಾಸ ಮಾಡುತ್ತಾ ಇದ್ದರು. ತಮ್ಮ ತಂದೆಯಂದಿರು ಬಂದುದು ಅವರಿಗೆ ಗೋಚರವಾಗಲೇ ಇಲ್ಲ. ಒಂದು ತುಸು ದೂರದಲ್ಲಿ ನಾಲ್ಕು ಬಿಲ್ಲು – ಬಾಣಗಳು, ನಾಲ್ಕು ಖಡ್ಗಗಳು.

ಧರಣಯ್ಯ, ಚಂದ್ರಪ್ಪರಿಬ್ಬರೂ ಮೌನವಾಗಿ ಹಿಂದೆ ಮರಳಿದರು. ಚಂದ್ರಪ್ಪ ಕುಂಬಾರನ ಮುಖದಲ್ಲಿ ಆಶ್ಚರ್ಯ, ಭಯ, ಕ್ಷುಬ್ಧತೆಗಳು.

"ಅಯ್ಯನವರೇ? ಇದೇನು ಮಾಡಿದಿರಿ? ನಮ್ಮನ್ನು ದೊಡ್ಡ ಗಂಡಾಂತರಕ್ಕೆ ಈಡು ಮಾಡಿದಿರಿ. ಕುಂಬಾರ ಮಗನಿಗೆ ಅಕ್ಷರಾಭ್ಯಾಸ, ಆಯುಧಾಭ್ಯಾಸ ಕೊಡು ವುದು ಸರಿಯೇ? ನನಗೆ ಜಾತಿಯಿಂದ ಬಹಿಷ್ಕಾರವಾದೀತು. ನಾನೇನು ಬ್ರಾಹ್ಮಣನೇ? ಕ್ಷತ್ರಿಯನೇ? ಬ್ರಾಹ್ಮಣರ ವೃತ್ತಿ ಬ್ರಾಹ್ಮಣರಿಗೇ ಸರಿ."

ಧರಣಯ್ಯ ನಗುತ್ತಾ ಹೇಳಿದ, "ಗುರಿಕಾರ, ಬ್ರಾಹ್ಮಣ–ಬ್ರಾಹ್ಮಣ ಎಂದು ಬಡಬಡಿಸಬೇಡ. ಬ್ರಾಹ್ಮಣನೆಂದರೆ ಯಾರು? 'ಬ್ರಹ್ಮ ಜ್ಞಾನೇನ ಬ್ರಾಹ್ಮಣಃ.' ಯಾರಿಗೆ ಬ್ರಹ್ಮಜ್ಞಾನ ಲಭಿಸಿದೆಯೋ ಅವನೇ ಬ್ರಾಹ್ಮಣ. ವೇದಪಾರಾಯಣ ಮಾಡುವಾತನೇ ವಿಪ್ರ. ನನಗೆ ಬ್ರಹ್ಮಜ್ಞಾನ ಲಭಿಸಿಲ್ಲ. ನಾನು ನಿಜಕ್ಕೂ ಬ್ರಾಹ್ಮಣನಲ್ಲ. ನೀವೆಲ್ಲರೂ ನನ್ನನ್ನು ಬ್ರಾಹ್ಮಣನೆಂದು ಕರೆಯುತ್ತೀರಿ. ಅದು ನಿಮ್ಮ ಭ್ರಮೆ. ಲೋಕಾಚಾರದ ರೂಢಿಯ ಭ್ರಮೆ. ಒಮ್ಮೊಮ್ಮೆ ವೇದಪಾರಾಯಣ ಮಾಡುತ್ತಿದ್ದೇನೆ. ಆದುದರಿಂದ ಒಮ್ಮೊಮ್ಮೆ ವಿಪ್ರ ಎಂದು ಕರೆದರೆ ಅಸಂಗತವಲ್ಲ. ಬ್ರಾಹ್ಮಣ, ಕ್ಷಾತ್ರ ಇವೆಲ್ಲ ಮನುಷ್ಯನ ಸ್ವಯಂ ಯೋಗ್ಯತೆ, ಪ್ರತಿಭೆ, ಪರಿಶ್ರಮ ಕೌಶಲ್ಯಗಳಿಂದಲೇ ಉತ್ಪನ್ನವಾಗುವುವು. ಕೃಷ್ಣ – ಬಾದರಾಯಣ, ವ್ಯಾಸಋಷಿಯು ಬೆಸ್ತರ ಸ್ತ್ರೀಯ ಮಗ, ವಾಲ್ಮೀಕಿಮುನಿ ವ್ಯಾಧನು."

"ಅಯ್ಯನವರೇ, ನೀವು ಪಂಡಿತರು, ನನ್ನ ಮುಂದೆ ಈ ವ್ಯಾಖ್ಯಾನ ಮಾಡಿ ನನ್ನನ್ನು ಹುಚ್ಚುಗೆಡಿಸಬೇಡಿ. ನಿಮ್ಮ ಮಾಯೆ ನಿಮಗೇ ಇರಲಿ, ನನ್ನ ಕುಲವೃತ್ತಿ ಯೇನು ಹೀನವಲ್ಲ. ಇಡೀ ಸೀಮೆಯಲ್ಲೇ ಕುಂಬಾರರ ಗುರಿಕಾರ ಚಂದ್ರಪ್ಪನಿಗೆ ಮರ್ಯಾದೆಯಿದೆ. ನನ್ನ ಮಗ ನಮ್ಮ ಕುಲದ ಕೀರ್ತಿಯನ್ನು ಬೆಳೆಸಬೇಕು. ನನ್ನ ತಂದೆ ಬೆಳ್ಳಿಯ ಕಡಗ ಹೊತ್ತಿದ್ದ. ನನಗೆ ಚಿನ್ನದ ಕಡಗ ಲಭಿಸಿದೆ. ನನ್ನ ಮಗನಿಗೆ ಎರಡು ಚಿನ್ನದ ಕಡಗಗಳು ದೊರೆಯಬೇಕು. ಗ್ರಾಮದ ಹತ್ತು ಸಮಸ್ತ ರೆದರು ಜರಿಯ ಮುಂಡಾಸು ಇಟ್ಟುಕೊಳ್ಳುವ ಅಧಿಕಾರ ಬರಬೇಕು. ನಿಮ್ಮ ಪುಸ್ತಕಗಳು ನಮಗೆ ಬೇಡ, ನಿಮ್ಮ ಬಿಲ್ಲು-ಬಾಣ-ಖಡ್ಗಗಳು ನಮಗೆ ಬೇಡ. ಹಗಲು ಕಂಡ ಬಾವಿಗೆ ರಾತ್ರಿಯಲ್ಲಿ ಧುಮುಕುವ ನಿಮ್ಮ ಉಪದೇಶ ನಮಗೆ ಬೇಡ. ನನ್ನ ಮಗನಿಗೆ ನಿಮ್ಮ ಐಗಳ ಕಸಬೂ ಬೇಡ. ದಳವಾಯಿಯ ಕಸಬೂಬೇಡ. ನನ್ನ ಮಗನ ಮೇಲೆ ನೀವು ಮಾಯಾಜಾಲ ಹೆಣೆಯಬೇಡಿರಿ. ಅವನ ಮೇಲೆ ನಿಮಗೆ ಎಳ್ಳಷ್ಟೂ ಅಧಿಕಾರವಿಲ್ಲ."

"ಗುರಿಕಾರ, ಸಿಟ್ಟಿಗೇಳಬೇಡ. ಸ್ವಲ್ಪ ತಾಳ್ಮೆಯಿಂದ ಕೇಳು. ಈ ಪ್ರಸಂಗದ ಕಥೆಯನ್ನು ಹೇಳುತ್ತೇನೆ. ನಾನು ಮೊದಲೇ ನಿನಗೆ ಹೇಳಬೇಕಿತ್ತು. ಹೇಳದಿದ್ದುದು ನನ್ನ ಅಪರಾಧ. ಆದರೆ ನೀನು ಒಪ್ಪಲಾರೆ. ಸಿಡಿಗುಡುವೆ ಎಂದು ಚಿಂತಿಸಿ ಈ ಅಪರಾಧವನ್ನು ಮಾಡಿದೆ. ಒಂದು ಕ್ಷಣ ಶಾಂತಿಯಿಂದ ಕೇಳು. ನಿನ್ನ ಮಗ ಐತ್ತಪ್ಪ ಮತ್ತು ನನ್ನ ಹುಡುಗರು ಸಂಶಿಪ್ಪ, ಸುಮಂತ ತಮ್ಮಿಂದ ತಾವೇ ಗೆಳೆಯರಾಗಿ ಬಿಟ್ಟಿದ್ದರು. ಜಾತ್ರೆಯಲ್ಲೋ ಯಕ್ಷಗಾನ ಬಯಲಾಟದಲ್ಲೋ ಪರಿಚಯ ವಾಯಿತಂತೆ. ನಿನ್ನ ಮಗ ಐತು ಆಟದಲ್ಲೂ ಮಾತಿನಲ್ಲೂ ಚುರುಕು. ಸದಾ ಹಸನ್ಮುಖಿ. ಎಂಥಾ ಪ್ರಸಂಗದಲ್ಲೂ ಹಿಂಜರಿಯದೆ ಮುಂದೆ ಬರುವ ಉತ್ಸಾಹಿ ಸಾಹಸಿ, ಒಂದು ಬಾರಿ ನಮ್ಮ ದನಕರುವೊಂದು ಹಾಳು ಬಾವಿಯಲ್ಲಿ ಕಾಲು ತಪ್ಪಿ ಬಿತ್ತು. ಬೇರೆಲ್ಲರೂ 'ರಾಮ ರಾಮ' ಎಂದು ಗೋಳಿಡುತ್ತಿರುವಂತೆಯೇ ಐತು ಬಾವಿಯೊಳಗೆ ಹೋಗಿ ಶತ ಪ್ರಯತ್ನ-ಸಾಹಸದಿಂದ ಕರುವನ್ನು ಮೇಲೆ ತಂದು ಅದರ ಜೀವನವನ್ನು ಉಳಿಸಿದ. ಇನ್ನೊಂದು ಬಾರಿ ಚಿಕ್ಕ ಬಲ್ಲಾಳರ ತುಂಟ ಕುದುರೆ ಹುಚ್ಚುಚ್ಚಾಗಿ ಓಡಾಡುತ್ತಿದ್ದಾಗ ನಿನ್ನ ಐತು ಕುದುರೆ ಸವಾರಿಯ ಅಭ್ಯಾಸ ಇಲ್ಲದೇ ಇದ್ದರೂ, ಅದನ್ನು ಹಿಡಿದು ನಿಲ್ಲಿಸಿದ. ಉಪಾಧ್ಯಕ್ಷರ ಸಣ್ಣ ಮಗು ಆಡುತ್ತಾ ಡುತ್ತಾ ಹೊಳೆಗೆ ಬಿದ್ದಾಗ ಬೇರೆಲ್ಲರೂ 'ಅಯ್ಯೋ ದೇವರೇ' ಎಂದು ಅರಚಿದ್ದೆ ಸರಿ. ನಿನ್ನ ಮಗ ಹೊಳೆಗೆ ಹಾರಿ ಈಜಿ ಮಗುವನ್ನು ಬದುಕಿಸಿದ. ಆದುದರಿಂದ ನಿನ್ನ ಐತುವಿನ ಮೇಲೆ ನನ್ನಿಬ್ಬರು ಹುಡುಗರಿಗೂ ಪ್ರೀತಿ ಮಾತ್ರವಲ್ಲ – ಗೌರವ. ಅವರಿಗೆ ಅವನೊಬ್ಬ ನಾಯಕ. 'ಜಾತಿ ಜಾತಿ' ಎಂದು ತಾಯಿ ಗೋಳಿಟ್ಟರೂ ಮಕ್ಕಳು ಉತ್ಸಾಹವನ್ನು ದಬ್ಬುವುದು ಬೇರೆಯದೇ ಒಂದು ಕಥೆ. ಒಂದು ದಿನ ಈ

ಮೂವರೂ ಯಾರನ್ನೂ ವಿಚಾರಿಸದೆ ತೋಟದ ಬಾಳೆಯ ಮರದಿಂದ ಹಣ್ಣನ್ನು ಕಿತ್ತರು. ನನ್ನಾಕೆಗೆ ಬಹು ಕೋಪ ಬಂತು. ನಾನು ವಿಚಾರಣೆ ಮಾಡಿ ದಂಡಿಸಿದೆ. ನನ್ನಿಬ್ಬರ ಮಕ್ಕಳ ಅಂಗೈಗೆ ಬೆತ್ತದಿಂದ ಚೆನ್ನಾಗಿ ಬಾರಿಸಿದೆ. ಅನಂತರ ನಿನ್ನ ಮಗ ನಿಗೆ ಹೇಳಿದೆ. ನಿನ್ನ ತಂದೆ ಚಂದ್ರಪ್ಪ ಗುರಿಕಾರ. ಅವನಿಗೆ ನಿನ್ನ ಅಪರಾಧವನ್ನು ಹೇಳುತ್ತೇನೆ. ಅವನೇ ನಿನ್ನನ್ನು ದಂಡಿಸಲಿ-ಎಂದು. ಆಗ ಐತಪ್ಪ ತನ್ನ ಅಂಗೈ ಯನ್ನು ಮುಂದೆ ಚಾಚಿ 'ಅವರಿಬ್ಬರನ್ನೂ ನೀವು ದಂಡಿಸಿದಿರಿ. ನನ್ನನ್ನೂ ನೀವೇ ದಂಡಿಸಬೇಕು' ಎಂದು ಹಠ ಹಿಡಿದ. ಆತ ನನ್ನ ಬಲಗೈ ಮುಂದೆ ಹಿಡಿದಾಗ ಹಠಾ ತ್ತಾಗಿ ನನ್ನ ದೃಷ್ಟಿ ಅವನ ಹಸ್ತರೇಖೆಗಳ ಮೇಲೆ ಬಿತ್ತು. ನೋಡಿ ನಾನು ಚಕಿತ ನಾದೆ. ನನಗೆ ಅಲ್ಪ ಸ್ವಲ್ಪ ಹಸ್ತ ಸಾಮುದ್ರಿಕದ ಜ್ಞಾನ ಇದೆ. ನನ್ನ ಚಿಕ್ಕಪ್ಪ ನವರು ಸಾಮುದ್ರಿಕರು. ನಿನ್ನ ಐತಪ್ಪನ ಹಸ್ತರೇಖೆಯಲ್ಲಿ ವೀರ ಸರಸ್ವತೀಯೋಗ ಮತ್ತು ರಾಜಲಕ್ಷ್ಮೀಯೋಗ ನನಗೆ ಕಂಡಂತೆ ಭಾಸವಾಯಿತು. ನಾನೇನೂ ಪಾರಂಗತ ನಲ್ಲ. ಅಲ್ಪ ಸ್ವಲ್ಪ ಜ್ಞಾನ. ಆದರೂ ನನ್ನ ಮನಸ್ಸಿಗೆ ಕಂಡಿತು – ಈ ಹುಡುಗನಿಗೆ ದೇವರು ಗುರುತರ ಭಾಗ್ಯವನ್ನು ಕೊಟ್ಟಿರುವಂತೆ ತೋರುತ್ತದೆ. ಅವನ ವರ್ತ ನೆಯೂ ಸ್ವಭಾವವೂ ಅನುಗುಣವಾಗಿದೆ. ದಾಳಿಂಬದ ಸಸಿ ಎಲ್ಲಿಂದಲೋ ತಾನಾಗಿಯೋ ತೋಟದಲ್ಲಿ ಹುಟ್ಟಿದರೆ, ಅದನ್ನು ಅಗಣ್ಯವೆಂದು ನಿರ್ಲಕ್ಷಿಸು ವುದು ಸರಿಯೇ? ಜಡತನದಿಂದ ಬೆಳೆಸುವುದು ಕರ್ತವ್ಯವಲ್ಲವೇ? ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ವಜ್ರದ ಒರಟು ಹರಳು ಕಂಡರೆ ಅಸಡ್ಡೆ ಮುಖ ತಿರುವುದೇ? ಅದನ್ನು ಕ್ರಮದಂತೆ ಜಾಗರೂಕತೆಯಿಂದ ಕೆತ್ತಿಸಿ ಉಜ್ಜಿಸಿ ರತ್ನವಾಗಿ ಮಾಡುವುದು ವಿಹಿತವಲ್ಲವೇ? ಐತಪ್ಪನಿಗೆ ನನ್ನ ಹುಡುಗರಂತೆಯೇ ಅಕ್ಷರಾಭ್ಯಾಸಬೇಕು ಎಂಬ ಉತ್ಕಟೇಚ್ಛೆ ಬೆಳೆಯಿತು. ನನ್ನ ಅನುಮತಿ ಕೇಳದೆಯೇ ಆಗಾಗಲೇ ನನ್ನ ಮಕ್ಕಳು ಆತನಿಗೆ ಸಾಕಷ್ಟು ಕಲಿಸಿಯೇ ಬಿಟ್ಟಿದ್ದರು. ನಾನು ಯೋಚಿಸಿದೆ. ಇದರಲ್ಲೇನೋ ದೈವ ಸಂಕೇತವಿದೆ. ಧರ್ಮ ಕರ್ಮ ಸಂಯೋಗವಿದೆ. ನಾನಾಗಿ ಹೇಳಿಕೇಳಿ ಬರಿಸಿ ದ್ದಲ್ಲ. ಈ ತರಳನ ಭಾಗ್ಯ ಉಜ್ವಲವಾಗುವುದಿದ್ದರೆ ನಮ್ಮಿಂದ ಕಿಂಚಿತ್ ನೆರವಾಗ ಬಾರದೇಕೆ? ಆದರಿಂದ ನನ್ನದೇ ಜನ್ಮ ಸಾರ್ಥಕವಾಗದೇ ಒಂದು ಮನುಷ್ಯ ಪ್ರಾಣಿಯು ಕೀರ್ತಿಶಾಲಿಯಾಗುವುದು ಒಂದು ಮಹತ್ಕಾರ್ಯ ಅದಕ್ಕೆ ನೆರವಾಗುವುದೂ ಒಂದು ಮಹತ್ಕಾರ್ಯ ಮಾತ್ರವಲ್ಲ ಒಂದು ಪುಣ್ಯ ಕಾರ್ಯವೂ ಸರಿ."

"ಅಯ್ಯನವರೇ, ನಿಮ್ಮ ಮಾತಿನಿಂದ ನನಗೆ ದಿಗ್ಭ್ರಾಂತಿಯಾಗಿದೆ. ಕಣ್ಣು ಕತ್ತಲೆ ಬರುತ್ತಿದೆ. ಐತು ನಮ್ಮ ಜಾತಿಯ ಗುರಿಕಾರನಾದರೆ ಸಾಲದೆ? ಈ ತಿಳಿ ಯದ ಮೋಹಜಾಲದಲ್ಲಿ ನಾವೇಕೆ ಬೀಳಬೇಕು?"

"ಗುರಿಕಾರ, ಕೇಳು. ಈ ಹುಡುಗನಿಗೆ ಗುರಿಕಾರನಾಗುವ ಯೋಗವಿದ್ದರೆ?

ರಾಜಯೋಗವಿದ್ದರೆ? ದೇವರುಕೊಟ್ಟ ವರವನ್ನು ನಿರಾಕರಿಸುವ ದೃಷ್ಟತನ ನಿನಗಿದೆಯೇ?"

"ಅಯ್ಯನವರೇ, ನನ್ನನ್ನು ಮಂಕುಗೆಡಿಸಬೇಡಿ. ಐತು ಕ್ಷತ್ರಿಯನಲ್ಲ; ಬ್ರಾಹ್ಮಣನಲ್ಲ. ಅರಸೊತ್ತಿಗೆ ಹೇಗೆ ಸಾಧ್ಯ?"

"ಗುರಿಕಾರ, ನಿನಗೆ ಇತಿಹಾಸ ತಿಳಿಯದು. ರಾಜವಂಶಗಳ ಮೂಲ ನನಗೆ ಗೊತ್ತು. ಮಹಾನ್ ನದಿಗಳ ಮೂಲ ಸಣ್ಣ ಹಳ್ಳ! ಗುಹೆಯ ಬದಿಯ ಕಲ್ಲೊಳ ಗಿಂದ ಜಿನಗುವ ನೀರು. ಶಾತವಾಹನ ಶಾತಕರಣಿ ರಾಜವಂಶಗಳ ಮೂಲವೇನು, ಗೊತ್ತೇ? ಚಂದೇಲಾ ವಂಶದ ಮೂಲವೇನು ಗೊತ್ತೇ? ನಾನು ಹಿಂದೆಯೇ ನಿನಗೆ ಹೇಳಿದೆ. ಋಷಿಯಾಗುವುದು ಜನ್ಮ ಮಾತ್ರದಿಂದಲ್ಲ. ಯೋಗ್ಯತೆ, ಪ್ರತಿಭೆ, ಸಾಧನೆ, ಪರಿಶ್ರಮ, ಆತ್ಮಬಲ, ಮೇಧೋಬಲಗಳಿಂದ. ರಾಜನಾಗುವುದೂ ಜನ್ಮ ಮಾತ್ರದಿಂದಲ್ಲ. ಪ್ರತಿಭೆ, ಸಾಹಸ, ಪರಿಶ್ರಮ, ವಿವೇಕಗಳಿಂದ. ಒಂದು ಮಾತು. ಈ ವಿಷಯುವನ್ನು ನೀನು ಯಾರಿಗೂ ಹೇಳಬಾರದು. ಜಾಗ್ರತೆ, ಏಕೆಂದರೆ ಆಳುವ ಮಹಾರಾಜರಿಗೆ, ಸಾಮಂತರಿಗೆ, ಪಾಳಯಗಾರರಿಗೆ ಇದು ತಿಳಿದರೆ ನಿನ್ನ ಮಗ ಅವರ ಅಸೂಯೆ ದ್ವೇಷಗಳಿಗೆ ಬಲಿಯಾಗಬಹುದು. ಮರಣದಂಡವೇ ಆಗಬಹುದು. ಜಾಗ್ರತೆ.

"ಅಯ್ಯನವರೇ ಕ್ಷಮಿಸಿರಿ, ಆದರೆ ಹೊಟ್ಟೆಯಲ್ಲಿರುವ ಮಾತನ್ನು ಹೇಳು ತ್ತೇನೆ. ನೀವು ಪಂಡಿತರೂ ಹೌದು. ಆದರೆ ನನ್ನ ಮಗನನ್ನು ನೀವು ಗಂಡಾಂತರಕ್ಕೆ ಈಡುಮಾಡಿದ್ದೀರಿ. ನಿಮ್ಮಿಂದ ಪಾಪ ಘಟಿಸಿದೆ."

"ಗುರಿಕಾರ, ಗಂಡಾಂತರ ನನಗೂ ಇದೆ. ಅರಸರಿಗೆ, ಸಾಮಂತರಿಗೆ ತಿಳಿದರೆ ನನ್ನನ್ನೂ ದಂಡಿಸರೇ? ಮತ್ತು ನಾನು ನಿಜಕ್ಕೂ ಪಾಪಿಯಾದರೆ ಪರಲೋಕದಲ್ಲಿ ನರಕ ಭೋಗಿಸಬೇಕು. ಆದರೆ ಒಂದು ಮನುಷ್ಯ ಪ್ರಾಣಿಯ ಪ್ರತಿಭೆಗೆ ನನ್ನಿಂದಾ ದಷ್ಟು ನೆರವಾಗದೇ ಹೋದರೆ ನನ್ನ ದೃಷ್ಟಿಯಲ್ಲೇ ನಾನು ಪಾಪಿಯಾಗುವೆನು. ಈ ಜೀವನದಲ್ಲೇ, ಇಹಲೋಕದಲ್ಲೇ ನನಗೆ ನರಕ ಭೋಗವಾಗುವುದು. ಅದು ಹೇಗೆಯೇ ಇರಲಿ. ಐತು ನಿನ್ನ ಮಗನು. ನನಗೆ ಅವನ ಮೇಲೆ ಲೇಶವೂ ಅಧಿಕಾರ ಇಲ್ಲ. ನೀನೇ ಯೋಚಿಸಿ ನಿರ್ಧರಿಸು; ಹೇಳಬೇಕಾದುದನ್ನೆಲ್ಲಾ ನಾನು ಕೂಲಂಕಷ ವಾಗಿ ಹೇಳಿದೆ. ಇನ್ನು ದೈವೇಚ್ಛೆ."

ಕುಂಬಾರನು ಭಾರವಾದ ಮನಸ್ಸಿನಿಂದ ಮನೆಗೆ ಮರಳಿದ. ಸಂಜೆ ಸ್ನಾನಮಾಡಿ ದೇಗುಲಕ್ಕೆ ಹೋಗಿ ಪ್ರದಕ್ಷಿಣೆ ಮಾಡಿ ಕೈಜೋಡಿಸಿ ಬಹುಕಾಲ ಕುಳಿತ.

ಮರುದಿನ ಪ್ರಾತಃಕಾಲ ಧರಣೇಂದ್ರಯ್ಯನ ಮನೆಗೆ ಬಂದು, "ಅಯ್ಯನವರೇ, ನೀವು ಬಲ್ಲವರು. ನೀವು ಮಾಡುತ್ತಿರುವುದು ನನ್ನ ಮಗನ ಹಿತಕ್ಕಾಗಿ. ನಾನು ಹೇಗೆ ಅಡ್ಡಬರಲಿ? ನಿಮ್ಮಿಚ್ಛೆಯಂತಾಗಲಿ" ಎಂದ.

"ಗುರಿಕಾರ, ದೈವೇಚ್ಛೆಯಂತಾಗಲಿ".

ಒಂದು ಮೂವತ್ತು ವರುಷ ನಂತರ ಮಹಾರಾಜ ಆದಿತ್ಯವರ್ಮನು ರಾಜಸಭೆಯಲ್ಲಿ ಸಿಂಹಾಸನಾರೂಢನಾಗಿ ವೈಭವದಲ್ಲಿ ಕುಳಿತಿದ್ದನು. ರಾಜಗುರು ಸುಶಿಷ್ಟ ಉನ್ನತ ಸ್ಥಾನದಲ್ಲಿ ಆಸೀನನಾಗಿದ್ದನು. ಮಹಾಮಂತ್ರಿ ಸಾಮಂತ ಸಿಂಹಾಸನದ ಕೆಳಗಿನ ಸ್ಥಾನದಲ್ಲಿ. ಸಾಮಂತರಾಜರು, ಮಹಾಮಾಂಡಲೀಕರು, ಪಾಳೆಯಗಾರರು, ನ್ಯಾಯಾಧೀಶ, ಕೋಶಾಧಿಕಾರಿ, ದಳಪತಿಗಳು, ವಂದಿಮಾಗಧರು ಇತ್ಯಾದಿಗಳು ಉಪಸ್ಥಿತರಾಗಿದ್ದರು. ರಾಜಪ್ರಾಸಾದದ ಅನತಿ ದೂರದಲ್ಲಿ ಘಟಭಾಂಡೇಶ್ವರ ದೇಗುಲದ ಉನ್ನತ ಗೋಪುರ-ಶಿಖರಗಳು ಶೋಭಾಯಮಾನವಾಗಿ ರಂಜಿಸುತ್ತಿದ್ದವು.

ಕುಶಲಪ್ರಶ್ನೆಗಳ ನಂತರ ಮಹಾರಾಜ ಆದಿತ್ಯವರ್ಮ ಪ್ರತಿಯೊಬ್ಬನೊಡನೆಯೂ "ನಿಮ್ಮ ಕಾರ್ಯಭಾರದಲ್ಲಿ ನನಗೆ ತಿಳಿಸಬೇಕಾದಂತಹ ವಿಶೇಷವಿದೆಯೇ?" ಎಂದು ವಿಚಾರಿಸಿದ.

ನ್ಯಾಯಧೀಶ ಹಿರಣ್ಯದಾಮನ ಸರದಿಬಂತು. ಆತ ಕೈ ಜೋಡಿಸಿ ಹೇಳಿದ, "ಮಹಾಪರಾಕು, ಮೂರು ಅಂಬಿಗರ ಯುವಕರನ್ನೂ ಒಬ್ಬ ಬ್ರಾಹ್ಮಣನನ್ನೂ ಸೆರೆ ಹಿಡಿಯಬೇಕಾಗಿದೆ. ಈ ಬ್ರಾಹ್ಮಣ ಪ್ರತಿಷ್ಠಿತ ಕುಲದವನು. ಮಹಾವಿದ್ವಾಂಸನೆಂದು ಖ್ಯಾತಿಪಡೆದವನು. ಆತನನ್ನು ಸೆರೆಹಿಡಿದ ಕಾರಣ ಕೆಲ ಜನರಿಗೆ ಅಸಂತುಷ್ಟಿಯುಂಟಾಗಿದೆ. ಈ ರಾಜಸಭೆಯಲ್ಲೇ ಉಪಸ್ಥಿತರಾಗಿರುವ ಕೆಲವು ಮಹನೀಯರೂ ನನ್ನೊಡನೆ ಈ ವಿಷಯದಲ್ಲಿ ವಿವಾದಿಸಿದ್ದಾರೆ."

"ಏಕೆ ? ಈ ನಾಲ್ಕು ಜನರ ಅಪರಾಧವೇನು ?"

"ಮಹಾಪರಾಕು, ಈ ಬ್ರಾಹ್ಮಣ ಪಂಡಿತರು ಗೌಪ್ಯವಾಗಿ ಈ ಮೂವರು ಅಂಬಿಗರ ಯುವಕರಿಗೆ ಅಕ್ಷರಾಭ್ಯಾಸವನ್ನು ಕೊಟ್ಟಿರುವರೆಂದು ಗುಪ್ತಚಾರರಿಂದ ತಿಳಿದು ಬಂದಿದೆ. ಗಾಯತ್ರೀ ಮಂತ್ರವನ್ನೂ ಬೋಧಿಸಿರಬಹುದೆಂದು ಗುಪ್ತಚಾರರ ಸಂದೇಹ."

"ಅಂಬಿಗರಿಗೆ ಅಕ್ಷರಾಭ್ಯಾಸ ? ಆಯುಧಾಭ್ಯಾಸ ? ಇದು ಮಹಾ ಘೋರ ಅಪರಾಧ, ನನ್ನ ರಾಜ್ಯದಲ್ಲಿ ಇಂಥಾ ಅಕೃತ್ಯವನ್ನು ಸಹಿಸಲಾರೆನು. ನಾಲ್ಕೂ ಜನ

ಪಾಪಿಗಳಿಗೆ ಮರಣದಂಡವೇ ಸರಿ. ಇಂಥಾ ಮಹಾತ್ವಾಂಕ್ಷೀ ಪಾಖಂಡಿಗಳಿಂದಲೇ ರಾಜದ್ರೋಹ ಬಂಡಾಯಗಳುಂಟಾಗುವವು."

"ಬ್ರಾಹ್ಮಣನಿಗೂ ಮರಣದಂಡವೇ ? ಮಹಾಪರಾಕು ?"

"ಆ ಬ್ರಾಹ್ಮಣನೇ ಈ ಅಪರಾಧಕ್ಕೆ ಮೂಲ ಕಾರಣನು. ಅವನ ಅಚಾತುರ್ಯ ವಲ್ಲದಿದ್ದರೆ, ಈ ಅಂಬಿಗರಿಗೆ ಹೇಗೆ ಅಕ್ಷರಾಭ್ಯಾಸ, ಆಯುಧಾಭ್ಯಾಸ ಹೇಗೆ ? ಮೊದಲು ಅಕ್ಷರಾಭ್ಯಾಸ, ಆಯುಧಾಭ್ಯಾಸ. ತರುವಾಯ ರಾಜ ಸಿಂಹಾಸನದ ಮೇಲೆ ಗೃಧ್ರದೃಷ್ಟಿ."

"ಆದರೆ ಮಹಾಪರಾಕು, ಬ್ರಾಹ್ಮಣಗೆ ಮರಣದಂಡ ನಿಷಿದ್ಧ. ಹೇಗೆ ಸಾಧ್ಯ?"

"ಆ ಪಾಖಂಡಿಯನ್ನು ಅಬ್ರಾಹ್ಮಣನನ್ನಾಗಿ ಮಾಡು. ಮಾಂಸವನ್ನು ಗಂಟಲಲ್ಲಿ ಬಲಾತ್ಕಾರದಿಂದ ತುರುಕಿಸು. ಮೂಗು ಹಿಚುಕಿ ಸುರಾಪಾನ ಮಾಡಿಸು. ಅವನ ಬ್ರಾಹ್ಮಣ್ಯ ನಷ್ಟವಾಗುವುದು. ಅನಂತರ ಅಪರಾಧಕ್ಕೆ ವಿಹಿತ ದಂಡವಾಗಲಿ."

ರಾಜಗುರು ಸುಶಿಷ್ಟ ಮೃದುವಾಗಿ ಬಾಯ್ತೆರೆದ – "ಮಹಾರಾಜ, ಆಯುಷ್ಯವಂತನೇ ಇಷ್ಟು ಅವಸರಿಸಬಾರದು. ಮರಣದಂಡವನ್ನು ಕ್ಷಣ ವಿಚಾರದೊಳಗೇ ವಿಧಿಸುವುದು ನಿನ್ನ ಸುಕೀರ್ತಿಗೆ ಶೋಭೆ ತಾರದು. ಏಕಾಂತವಾಗಿ ಸೂಕ್ಷ್ಮವಾಗಿ ವಿಚಾರಿಸಿದರೆ ನಿನ್ನ ನ್ಯಾಯ ಪರಾಯಣತೆಯ ಖ್ಯಾತಿ ಇನ್ನೂ ಹೆಚ್ಚು ಬೆಳಗುವುದು. ಇದು ನನ್ನ ಅಭಿಮತ.

"ಸರಿ, ರಾಜಗುರುವಿನ ಸಲಹೆಯನ್ನು ಮನ್ನಿಸಿದೆ. ನಿರ್ಧಾರವನ್ನು ನಾಳೆ ತಿಳಿಸುವೆನು."

ರಾಜ ಸಭಿಕರೆಲ್ಲರೂ ತೆರಳಿದ ನಂತರ ಮಹಾರಾಜನೂ, ರಾಜಗುರುವೂ, ಮಹಾಮಂತ್ರಿಯೂ ಏಕಾಂತವಾಗಿ ಕುಳಿತರು.

ಮಹಾಮಂತ್ರಿ ಸುಮಂತನೆಂದ: 'ಮಹಾಪರಾಕು, ಕ್ಷಮಿಸಬೇಕು. ಈ ಕಿಂಕರನ ಮಂದಬುದ್ಧಿಗೆ ಈ ನಾಲ್ಕು ಜನರಿಂದ ಘಟಿಸಿದುದು ಘೋರ ಅಕ್ಷಮ್ಯ ಅಪರಾಧವೆಂದು ತೋರುವುದಿಲ್ಲ. ಅಂಬಿಗರ ಯುವಕರಲ್ಲಿ ಪ್ರತಿಭೆಯಿದ್ದರೆ ಅವರೇಕೆ ವಿದ್ಯಾವಂತರಾಗಬಾರದು? ವಿದ್ಯೆಯೆಂದರೆ ಕಾಮಧೇನು, ಕಲ್ಪವೃಕ್ಷ. ಪ್ರತಿಭೆ ದೈವದತ್ತವಾದುದು.

'ಮಂತ್ರಿ, ನಿನ್ನ ಉಪಮಾಲಾಲಂಕಾರ ಗಾಥಾ ಬೇಡ. ಇದು ರಾಜಾಜ್ಞೆ.'

ಆಗ ರಾಜಗುರು ಸುಶಿಷ್ಟ ಮೃದುವಾಗಿ ಗಂಭೀರವಾಗಿ ಹೇಳಿದ:

'ಆದಿತ್ಯ, ನಿನಗೆ ಮರೆತು ಹೋಗಿದೆಯೆಂದು ತೋರುತ್ತದೆ. ನಾವು ಬಾಲ್ಯದ ಮಿತ್ರರು, ಒಡನಾಡಿಗಳು, ಸಹಾಧ್ಯಾಯಿಗಳು. ನೀನು ಜನ್ಮತಃ ಕ್ಷತ್ರಿಯನಲ್ಲ, ನೀನು ಜನ್ಮತಃ ಕುಂಬಾರನು. ನಿನ್ನ ತೀರ್ಥರೂಪರು ಕುಂಬಾರ ಉದ್ಯೋಗದಲ್ಲಿ ಪ್ರತಿಷ್ಠಿತರಾದ ಗುರಿಕಾರ ಚಂದ್ರಪ್ಪನವರು. ನಿನ್ನ ನಿಜವಾದ ಹೆಸರು ಐತಪ್ಪ, ನನ್ನ ತೀರ್ಥರೂಪರು ವೃದ್ಧಾಪ್ಯದಲ್ಲಿ ತಮ್ಮ ಮೂಲವೃತ್ತಿಯನ್ನು ನೆನಸಿ ಘಟ ಭಾಂಡೇಶ್ವರ ದೇಗುಲವನ್ನು ಕಟ್ಟಿಸಿದ್ದುದು ನಿನಗೆ ಗೊತ್ತು. ಗರ್ಭಗುಡಿಯ ಎದುರೇ ಒಂದು ದೊಡ್ಡ ಮಣ್ಣಿನ ಗಡಿಗೆಯೂ ಮತ್ತೊಂದು ಮಣ್ಣಿನ ಹಂಡೆಯೂ ಇದೆ. ಇದು ನನಗೆ ಸರಿಯಾಗಿ ಗೊತ್ತು."

ಆದಿತ್ಯವರ್ಮನ ಕಣ್ಣು ಕಲ್ಲಾಯಿತು.

"ಗುರುಪುತ್ರ, ಕಿವಿಗೊಟ್ಟು ಕೇಳು, ನಾವು ಬಾಲ್ಯದ ಮಿತ್ರರು ಹೌದು. ಒಡ ನಾಡಿಗಳು ಹೌದು. ಸಹಾಧ್ಯಾಯಿಗಳು ಹೌದು. ಆದರೆ ಈಗ ನಾನು ರಾಜ, ನೀನು ಪ್ರಜೆ. ರಾಜ ಸಮ್ಮುಖದಲ್ಲಿ ಸತ್ಯವೇ ಆಗಲಿ, ಮಿಥ್ಯೆಯೋ ಆಗಲಿ ಅಪ್ರಿಯ ವನ್ನು ಹೇಳುವುದು ಅಪಾಯಕರ. ನಿನ್ನ ತುಟಿಗಳಿಂದ ಆ ಪ್ರಾಚೀನಕಾಲದ ವಿಸ್ಮೃತ–ಮಾತುಗಳು, ಅಸಂಗತ–ಮಾತುಗಳು, ಅನುಚಿತ–ಮಾತುಗಳು ಇನ್ನು ಮುಂದೆ ಹೊರಬರದಿರಲಿ."

"ಕಿವಿಗೊಟ್ಟು ಕೇಳು : ನಾನು ಜನ್ಮತಃ ಕ್ಷತ್ರಿಯ. ಶ್ರೇಷ್ಠ ಚಂದ್ರ ವಂಶೀ ಯುವನು. ನನ್ನ ತೀರ್ಥರೂಪರ ಹೆಸರು ಮಹಾರಾಜ ಚಂದ್ರವರ್ಮ. ನನ್ನ ಮಾತೃಶ್ರೀಯವರ ಹೆಸರು ಮಹಾರಾಜ್ಞಿ ಪುಷ್ಪಾಂಬೆ. ಆತನ ಪಟ್ಟಾಭಿಷೇಕಕ್ಕೋಸ್ಕರವಾಗಿ ತಪೇರ ಋಷಿಗಳು ಒಂದು ಗಡಿಗೆಯಲ್ಲಿ ಪವಿತ್ರ ಗಂಗಾ ಜಲವನ್ನು, ಇನ್ನೊಂದು ಹಂಡೆಯಲ್ಲಿ ಪವಿತ್ರ ಕಾವೇರಿಯ ಜಲವನ್ನು ದಯ ಪಾಲಿಸಿದರು. ಘಟಭಾಂಡೇಶ್ವರ ದೇಗುಲದ ಗರ್ಭಗುಡಿಯೆದುರಿರುವವು ಇವೇ ಪವಿತ್ರ ಗಡಿಗೆ ಹಂಡೆಗಳು. ಈ ಐತಿಹ್ಯವನ್ನು ನನ್ನ ರಾಜಾಜ್ಞೆ ಪ್ರಕಾರ ಡಂಗುರ ಸಾರಿ ನನ್ನ ರಾಜ್ಯದಲ್ಲೆಲ್ಲಾ ಘೋಷಿಸಲಾಗಿದೆ. ದೇಗುಲದೊಳಗೂ ರಾಜ್ಯದ ಹತ್ತು ಸೀಮೆಯೊಳಗೆ ಹತ್ತು ಮಾನಸ್ಥಂಭಗಳ ಮೇಲೂ ಶಿಲಾಲೇಖಗಳಿಂದ ಈ ಐತಿಹ್ಯ ಘೋಷಿತವಾಗಿದೆ. ಶ್ಲೋಕಗಳನ್ನು ನಿನ್ನ ತೀರ್ಥರೂಪರೇ ವಿರಚಿಸಿದರು. ಇದನ್ನು ತಿಳಿದೂ ತಿಳಿದೂ ಅಸಂಬದ್ಧ ಅನುಚಿತ ಮಾತುಗಳನ್ನಾಡಿರುವಿ. ಇದು ನಿನ್ನ ಅಪ ರಾಧ. ಕೈಲಾಸವಾಸಿ ತೀರ್ಥರೂಪರು–ಅಂದಿನ ರಾಜಗುರುವರ್ಯರು, ರಾಜ ಸೇವಾ ದುರಂಧರರು ಮತ್ತು ವಿವೇಕಿಗಳು, ಮನೋಜ್ಞರು ಅವರ ಮುಖದಿಂದ ವಿಸ್ಮೃತ ವಾದ ಗತಕಾಲದ ಅಪ್ರಾಸಂಗಿಕ ಮಾತುಗಳು ಎಂದೂ ಬರಲಿಲ್ಲ."

೨೩ ನೇ ಪುಟ ನೋಡಿ

ಅದೈನ್ಯ ಒಂದು ವಿವೇಚನೆ

– ವಿದ್ವಾನ್ ಉಮಾಕಾಂತ ಭಟ್ಟ

ಅದೈನ್ಯ ಒಂದು ಆದರ್ಶ ಗುಣ. ಇದು ದೈನ್ಯಕ್ಕೆ ವಿರೋಧಿಯಾದುದು. ದೈನ್ಯವೆಂದರೆ ದೀನವ್ಯಕ್ತಿಗಳ ಮನೋಧರ್ಮ. ದೈನ್ಯ ಆತ್ಮಪ್ರಕಾಶವನ್ನು ಕುಗ್ಗಿಸುತ್ತದೆ. ಮನೋಬಲವನ್ನು ಅದುಮಿ ಹಿಮ್ಮೆಟ್ಟಿಸುತ್ತದೆ. ಇದರ ದೆಸೆಯಿಂದ ಪ್ರಜೆಗಳು ದಾಸರಾಗುತ್ತಾರೆ. ಅಸ್ವಸ್ಥರಾಗುತ್ತಾರೆ. ಅವರು ಮೈಬಾಗಿಸಿ, ಮುಖ ಮುದುರಿಸಿ, ಕೈ ಚಾಚಿ, ಹಲ್ಲುಗಿಂಜಿ ಬೇಡಲು ತೊಡಗುತ್ತಾರೆ. ಯಾಚನೆ ಹುಟ್ಟುವುದು ದೈನ್ಯದಿಂದಲೆ. ಆದುದರಿಂದ ಯಾಚನೆಯನ್ನೂ, ಇದಕ್ಕೆ ಕಾರಣವಾದ ದೀನಭಾವವನ್ನೂ ಚಿಂತಕರು ನಿಂದಿಸಿದ್ದಾರೆ.

'ವಿನಾ ದೈನ್ಯೇನ, ಜೀವನಮ್'–'ದೈನ್ಯವಿಲ್ಲದ ಬದುಕು' ಅವರ ದೈನಂದಿನ ದೇವಪೂಜಾನಂತರದ ಪ್ರಾರ್ಥನೆಯ ವಸ್ತುವಾಗಿದೆ.

ದೈನ್ಯಕ್ಕೂ ವಿನಯಕ್ಕೂ ಬಹಳ ಅಂತರವಿದೆ. ಆದರೆ ದೈನ್ಯವನ್ನೆ ವಿನಯವೆಂದು ಭಾವಿಸುವುದು ಸಾಮಾನ್ಯನ ಸರಣಿ. ಅವರ ಅಭಿಪ್ರಾಯದಂತೆ ಅದೈನ್ಯವು ಔದ್ಧತ್ಯವಾಗಿರುತ್ತದೆ. ವಸ್ತುತಃ ವಿನಯ ದೈನ್ಯವಲ್ಲ; ಅದೈನ್ಯ ಔಧತ್ಯವಲ್ಲ. ವಿನಯ ಹಿರಿದಾದ ವ್ಯಕ್ತಿ–ವಸ್ತುಗಳ ಬಗೆಗೆ ಒಡಮೂಡಿದ ಆದರಾತಿಶಯ. ವಿವೇಚನಾಪೂರ್ವಕವಾದ ಸೌಶಿಲ್ಯ. ಇಂಥಹ ವಿನಯ ಮತ್ತು ಅದೈನ್ಯಗಳನ್ನು ಜನರಲ್ಲಿ ಒಡಮೂಡಿಸಿ ಬೆಳೆಸುವುದು ಪ್ರಾಚೀನ ವಿದ್ಯಾಪದ್ಧತಿಯ ನಿಜವಾದ ಗುರಿಯಾಗಿತ್ತು.

ಸಾಮಾಜಿಕ ಒಪ್ಪಂದಗಳಿಗೆ ಯಾವುದೆ ವ್ಯಕ್ತಿ ಬದ್ಧವಾಗುವುದು ಅವನ ವಿನಯದಿಂದ. ಆದರೆ ಆ ಒಪ್ಪಂದಗಳು ಕ್ಲಿಷ್ಟವಾಗಿ, ಜಾಲದಂತೆ ಗೋಜಲಾಗಿ ವ್ಯಕ್ತಿಯನ್ನು ದೀನತೆಯತ್ತ ತಳ್ಳಿ ಉಸಿರುಗಟ್ಟಿಸುವಂತಾಗಬಾರದು. ವ್ಯಕ್ತಿ ಸ್ವಾತಂತ್ರ್ಯ ಅರ್ಥವತ್ತಾಗಿ ಉಳಿದುಕೊಳ್ಳುವುದು ಅದೈನ್ಯದಿಂದ. ಹೀಗೆ ಸಮಾಜಕ್ಕಾಗಿ ವಿನಯ, ವ್ಯಕ್ತಿಸ್ವಾತಂತ್ರ್ಯಕ್ಕಾಗಿ ಅದೈನ್ಯಗಳು ಅನಿವಾರ್ಯ. ಈ ಎರಡು ಗುಣ–ಮೌಲ್ಯಗಳನ್ನೂ ಸಮವಾಗಿ ಬೆರೆಸಿಕೊಂಡು ರೂಪಿತವಾದ ಶಾಸನ ಪದ್ಧತಿ ಪ್ರಜಾಸತ್ತೆ. ಆದುದರಿಂದ ಉತ್ತಮ ಪ್ರಜಾಪ್ರಭುತ್ವವು ವಿನಯ ಮತ್ತು ಅದೈನ್ಯಗಳು ಪ್ರಜೆಗಳಲ್ಲಿ ಹದವಾದ ಮೈದಳೆದಾಗ ಮಾತ್ರ ಸಾಧ್ಯ.

ಜನರಲ್ಲಿ ದೈನ್ಯಭಾವ ಕುದುರುವುದು ಕೊರತೆಯಿದ್ದಾಗ, ಅಶಕ್ತಿಯಿದ್ದಾಗ. ದ್ರವ್ಯದಾರಿದ್ರ್ಯ, ಅನಾರೋಗ್ಯ, ಅಶಾಂತಿ, ಅರಕ್ಷಿತ ಮನೋಭಾವಗಳಿಂದ ಸೋಲು

ಮನಸ್ಸು ಉಂಟಾದಂತೆ ವ್ಯಕ್ತಿ ತನ್ನಲ್ಲಿ ಕುಬ್ಜತೆಯನ್ನು ಕಾಣತೊಡಗುತ್ತಾನೆ. ಹೀನತ್ವವನ್ನು ಆರೋಪಿಸಿಕೊಳ್ಳುತ್ತಾನೆ. ಆಗ ಅವನು ಹೇಗಾದರೂ ಮಾಡಿ ತನ್ನ ಕೊರತೆಯನ್ನು ನೀಗಿಸಿಕೊಂಡು, ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಹವಣಿಸುತ್ತಾನೆ. ಇದಕ್ಕಾಗಿ ಅವನು ಆಯ್ಕೆಮಾಡಿಕೊಳ್ಳುವ ಸುಲಭ ಮಾರ್ಗ ಯಾಚನೆ. ಇದು ಈ ಸ್ಥಿತಿಯಲ್ಲಿ ಇವನಿಗೆ ಅನಿವಾರ್ಯವೂ ಆಗಿರಬಹುದು. ಆದರೆ ಸಮರ್ಥನಲ್ಲಿ, ಉದಾರ ಮನಸ್ಸಿನವನಲ್ಲಿ ಇಟ್ಟ ಬೇಡಿಕೆ ಮಾತ್ರ ಸಫಲವಾಗುತ್ತದೆ. ಇಲ್ಲದಿದ್ದರೆ ಬೇಡಿಕೆ ಹುಸಿಯಾಗಿ ಬೇಡಿಕೊಂಡವನು ಹಾಸ್ಯದ ವಸ್ತುವಾಗುತ್ತಾನೆ. ಆದರೆ ದೈನ್ಯ ಪ್ರೇರಿತ ಯಾಚಕನಿಗೆ ಈ ವಿವೇಚನೆಯೆಲ್ಲಿ? ಅವನು ಎಲ್ಲರನ್ನೂ ಯಾಚಿಸಿ ಪರಾಭವವನ್ನು ಅನುಭವಿಸಬಹುದು. ಆಗ ಹಿತೈಷಿಗಳಾದವರು ಸೂಕ್ತ ಮಾರ್ಗದರ್ಶನ ಮಾಡಬೇಕು. ಅವನಲ್ಲಿ ಅದೈನ್ಯವನ್ನು ಉಜ್ವಲಗೊಳಿಸಬೇಕು. ಬೇಡಿಕೆಯನ್ನು ಹುಸಿಮಾಡದ ಯೋಗ್ಯದಾತಾರನ ಪರಿಚಯ ಮಾಡಿಕೊಡಬೇಕು.

ಇಂಥ ಜೀವನಾನುಭವವನ್ನು ತನ್ನ ಕಲ್ಪನೆಯ ಮೂಸೆಯಲ್ಲಿ ಕರಗಿಸಿ ಪಾಕ ಮಾಡಿ ಪದ್ಯದ ಪಡಿಯಚ್ಚಿನಲ್ಲಿ ಎರಕಹೊಯ್ದ ಕವಿ ಭರ್ತೃಹರಿ. ಯೋಗಿಯೂ, ಮಹಾಪಂಡಿತನೂ ಆಗಿದ್ದ ಇವನು ತನ್ನ ಅಂತರಂಗದಲ್ಲಿ ಮೈದಳೆದ ಈ ಭಾವವನ್ನು ಸಮರ್ಥವಾಗಿ–ಸೂಕ್ಷ್ಮವಾಗಿ ಅಭಿವ್ಯಕ್ತಿಗೊಳಿಸಲು "ಅನ್ಯಾಪದೇಶ" ವಿಧಾನವನ್ನು ಈ ಪದ್ಯದಲ್ಲಿ ಅನುಗೊಳಿಸಿದ್ದಾನೆ:

ರೇರೇ ಚಾತಕ ಸಾವಧಾನ ಮನಸಾ ಮಿತ್ರಕ್ಷಣಂ ಶ್ರೂಯತಾಮ್
ಅಂಭೋದಾ ಬಹವೋ ವಸಂತಿ ಗಗನೇ ಸರ್ವೇಪಿ ನೈತಾದೃಶಾಃ ।
ಕೇಚಿ ದ್ವೃಷ್ಟಿಭಿರಾರ್ದ್ರಯಂತಿ ವಸುಧಾಂ ಗರ್ಜಂತಿ ಕೇಚಿ ದ್ವೃಥಾ
ಯಂ ಯಂ ಪಶ್ಯಸಿ ತಸ್ಯ ತಸ್ಯ ಪುರತಃ ಮಾ ಬ್ರೂಹಿ ದೀನಂ ವಚಃ॥

"ಓ, ಗೆಳೆಯ ಚಾತಕ, ಒಂದು ಕ್ಷಣ ಸಾವಧಾನವಾಗಿ ಕೇಳು. ಆಕಾಶದಲ್ಲಿ ಮೋಡಗಳು ಬಹಳಿವೆ. ಆದರೆ ಅವೆಲ್ಲ ನೀನಂದುಕೊಂಡ ರೀತಿಯವಲ್ಲ. ಕೆಲವು ಮಳೆಯಿಂದ ಭೂಮಿಯನ್ನು ಆರ್ದ್ರಮಾಡುತ್ತವೆ. ಮತ್ತೆ ಕೆಲವು ವ್ಯರ್ಥವಾಗಿ ಗುಡುಗುತ್ತವೆ. ಆದ್ದರಿಂದ ಯಾವ ಯಾವ ಮೋಡವನ್ನು ಕಾಣುವೆಯೊ, ಅದರದರ ಎದುರು ದೈನ್ಯದ ಮಾತನ್ನು ಆಡಬೇಡ."

ಚಾತಕ ಪಕ್ಷಿ ಭೂಮಿಗೆ ಬಿದ್ದ ನೀರನ್ನು ಗುಟುಕಿಸುವದಿಲ್ಲ. ಭೂಮಿ ತಲುಪಿದ ನೀರು ಇದಕ್ಕೆ ಒಲ್ಲದು. ಬೆಳದಿಂಗಳ ಇರುಳಿನಲ್ಲಿ ಬೀಳುವ ಇಬ್ಬನಿಗಳನ್ನು ಕುಡಿದು ತನ್ನ ತೃಷೆಯನ್ನು ತೀರಿಸಿಕೊಳ್ಳುತ್ತದೆ. ಮಳೆಗಾಲದ ಹೊಸ ಮುಗಿಲ ಮೊದಲ ಹನಿಗಳೆಂದರೆ ಇದಕ್ಕೆ ಪಂಚಪ್ರಾಣ. ಹಾಗಾಗಿ ಇದು ಕಾರ್ಮುಗಿಲ ಬರವಿನ ಪ್ರತೀಕ್ಷೆಯಲ್ಲಿದೆ. ಮಳೆಗಾಲ ಬಂತು. ನಭೋಮಂಡಲವನ್ನು ಮೇಘಮಂಡಲ ಆವರಿಸಿದೆ.

ಈಗ ಚಕೋರ ಎಲ್ಲ ಮೋಡಗಳನ್ನು ಯಾಚಿಸುತ್ತಿದೆ – ಅಮೃತಧಾರಾ ವರ್ಷಕ್ಕಾಗಿ. ಪಾಪ, ಇದಕ್ಕೆ ಗೊತ್ತಿಲ್ಲ. ಕೆಲವು ಮೋಡಗಳು ಮಾತ್ರ ಮಳೆ ಸುರಿಸಿ ಉಪಕಾರ ಮಾಡುತ್ತವೆ; ಮಿಕ್ಕವು ಕೇವಲ ಆಡಂಬರದ ಗುಡುಗಿನ ಸದ್ದುಮಾಡಿ ದೂರ ಹಾರಿ ಹೋಗುತ್ತವೆ – ಎಂದು.

ಕವಿಯೊಬ್ಬ ಆಶ್ರಯದ ಅನ್ವೇಷಣೆಯಲ್ಲಿದ್ದಾನೆ. ಪೋಷಕನಿಲ್ಲದೆ ಇವನ ಕಾವ್ಯಲತೆ ಕೊಸರಿ, ಹೂವಿಡಿದು ಫಲಿಸುವ ಸಂಭವವಿಲ್ಲ. ಆದುದರಿಂದ ಪ್ರಕಾಶಕನಾಗಿ ಉಪಕರಿಸುವ ದಣಿಗಾಗಿ ಹುಡುಕಾಟ ಮುಂದುವರಿಸಿದ್ದಾನೆ. ಕಂಡ–ಕಂಡ ಧನಿಕರ ಬಳಿಯಲ್ಲಿ ಆಶ್ರಯ ಭಿಕ್ಷೆಯನ್ನು ಬೇಡುತ್ತಿದ್ದಾನೆ. ಆದರೆ ಅವರೆಲ್ಲ ಕವಿಯ ಇಷ್ಟಾರ್ಥವನ್ನು ಪೂರೈಸುವವರೆ? ಯಾಚಕನ ಯಾಚನೆಯನ್ನು ಹುಸಿ ಮಾಡದ ದಾತಾರ ಬಲು ಅಪರೂಪ. ಉಳಿದವರು ಆಡಂಬರದ ಮಾತಾಡುವ ಬಡಾಯಿಕೋರರು. ಎಲ್ಲರನ್ನೂ ಅಲಕ್ಷಿಸಿ ನಡೆದುಕೊಳ್ಳುವ ಅಹಂಕಾರಿಗಳು. ಅವರ ಮುಂದಿಟ್ಟ ಬೇಡಿಕೆ ವ್ಯರ್ಥವಷ್ಟೇ ಅಲ್ಲದೆ ಅನರ್ಥಕಾರಿಯೂ ಅಹುದು. ಆದುದರಿಂದ ಕವಿ ಹಿತೈಷಿಯಾಗಿ ಆಶ್ರಯಾಪೇಕ್ಷಿ ಕವಿಗೆ ತಿಳಿಯ ಹೇಳುತ್ತಿದ್ದಾನೆ– "ಮಿತ್ರ, ಕ್ಷಣಕಾಲ ಯೋಚಿಸು ಕಂಡಕಂಡವರಲ್ಲಿ ದೈನ್ಯದ ಮಾತುಗಳನ್ನು ಆಡಬೇಡ. ಆಡಿ ಅಪಹಾಸ್ಯದ ಪಾತಳಿಗೆ ಇಳಿದು ಹೋಗಬೇಡ." ★

ಘಟ ಭಾಂಡೇಶ್ವರ........ 20 ನೇ ಪುಟದಿಂದ

"ಕೇಳು : ಆ ನಾಲ್ಕೂ ಜನ ಪಾಖಂಡಿಗಳಿಗೆ ಮರಣದಂಡನೆ. ಇದು ರಾಜಾಜ್ಞೆ. ಇನ್ನೂ ಕಿವಿಗೊಟ್ಟು ಕೇಳು. ನಿಮ್ಮಿಬ್ಬರ ಬಾಯಿಯಿಂದ ಆ ಗತ ಕಾಲದ ವಿಸ್ಮೃತ – ವಿಷಯಗಳ ಒಂದು ಅನುಚಿತ ಶಬ್ದ ಹೊರಟರೆ ನಿಮಗೂ ಅದೇ ದಂಡ. ಇದು ರಾಜಾಜ್ಞೆ. ಈ ಸಂಭಾಷಣೆ ಇಲ್ಲಿಗೆ ಸಮಾಪ್ತವಾಯಿತು. ತಾವು ಸ್ವಸ್ಥಾನಗಳಿಗೆ ತೆರಳೋಣವಾಗಲಿ." ★

ಖಾನ್ ಅಬ್ದುಲ್ ಗಫಾರ್ ಖಾನ್

೧೯೯೦, ಗಡಿನಾಡಿನ ಗಾಂಧೀ ಎಂದು ಪ್ರಸಿದ್ಧರಾಗಿರುವ ಭಾರತ ರತ್ನ ಖಾನ್ ಅಬ್ದುಲ್ ಗಫಾರ್‌ಖಾನರ ಜನ್ಮ ಶತಮಾನೋತ್ಸವ ವರ್ಷ. ಅವರಿಗೆ 'ಜನಪದ ವಿಚಾರ' ದ ಹೃತ್ಪೂರ್ವಕ ನಮನ.

ಒಂದು ತತ್ವ ಪದ

ನಿಮ್ಮೆರಡು ದೇವರು ಎಲ್ಲಿಂದ ಬಂದರು ?
ಹೇಳಯ್ಯ, ನಿನಗೆ ಈ ಹುಚ್ಚ ಹಿಡಿಸಿದವರಾರು ?
ರಾಮು, ಅಲ್ಲಾ, ಕೃಷ್ಣ, ಕರೀಮು, ಹರಿ, ಹಜರತ್
ಎಷ್ಟೊಂದು ಹೆಸರು !
ಎಷ್ಟೊಂದು ಆಭರಣ !
ಮೂಲವೊಂದೇ ಸ್ವರ್ಣ.
ಅದಕಿಲ್ಲ ಒಡಕಿನ ಎರಡೆರಡು ಗುಣ
ನಿತ್ಯ ಜೀವಿತಕಾಗಿ ಈ ಭಿನ್ನ ಮಾನ.
ಈ ನಮಾಜು–ಪೂಜೆ
ಈ ಮಹಾದೇವ–ಮಹಮ್ಮದ
ಈ ಬ್ರಹ್ಮ–ಆದಮ್
ಹಿಂದೂ–ತುರಕ
ಯಾರಿವರು, ಯಾರು
ಎಲ್ಲ ಈ ಭುವಿಗೆ ಸೇರಿದವರು.
ವೇದ, ಕುರಾನ – ಎಷ್ಟೊಂದು ಗ್ರಂಥಗಳು
ಮುಲ್ಲಾ, ಬ್ರಾಹ್ಮಣ – ಎಷ್ಟೊಂದು ಹೆಸರುಗಳು
ಎಲ್ಲ ಮಡಕೆಗೂ ಮೂಲ ಈ ನೆಲದ ಮಣ್ಣು.
ಕಬೀರ ಹೇಳುವನು
ಯಾರೂ ಕಾಣರು ರಾಮುನನ್ನು
ಜಗಳದಲ್ಲಿ ಇಬ್ಬರೂ ದಿಕ್ಕುಗಾಣರು
ಮೇಕೆ ಕಡಿಯುವವನೊಬ್ಬ
ಹಸು ಕತ್ತರಿಸುವವನೊಬ್ಬ
ತತ್ವಗಳ ಜಗಳದಲ್ಲಿ
ಜನ್ಮ ಪುಣ್ಯವ ಪೋಲು ಮಾಡುವರು.

– ಕಬೀರ್

ಜನಪದ ಸೇವಾ ಟ್ರಸ್ಟ್ ಪ್ರಕಟಣೆಗಳು

ಒಂದು ಹುಲ್ಲಿನ ಕ್ರಾಂತಿ

ಪ್ರಾಕೃತಿಕ ವ್ಯವಸಾಯ–ಒಂದು ಪರಿಚಯ

ಮೂಲ : ಮಸನೋಬು ಫುಕುವೋಕಾ ಕನ್ನಡಾನುವಾದ : ಸಂತೋಷ್ ಕೌಲಗಿ **ಬೆಲೆ : 15 ರೂ.**

ಮನುಕುಲ ವಿನಾಶ : ಬಾಂಬ್ ಬೇಕಿಲ್ಲ, ಅಣುಸ್ಥಾವರ ಸಾಕು

ಡಾ॥ ಎ. ಎನ್. ನಾಗರಾಜ್

ಬೆಲೆ : 2–00 ರೂ.

ಮಾರಾಟಕ್ಕೆ

ಕಾವ್ಯಸುಧಾ ಎಂ. ಎಸ್. ನರಸಿಂಹಮೂರ್ತಿ

ಬೆಲೆ : 12–00 ರೂ.

ಕಾಂಪೋಸ್ಟ್ ಗೊಬ್ಬರದ ಚಮತ್ಕಾರ

ಬೆಲೆ: 5–00 ರೂ.

KRNM 44

ಜನಪದ ಸೇವಾ ಟ್ರಸ್ಟ್ ಪರವಾಗಿ ಸುರೇಂದ್ರ ಕೌಲಗಿ ಅವರಿಂದ ಮೇಲುಕೋಟೆಯ
ಜನಪದ ಸೇವಾ ಟ್ರಸ್ಟ್ ಮುದ್ರಣಾಲಯದಲ್ಲಿ, ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.
ಸಂಪಾದಕರು : ಎಸ್. ಪಟ್ಟಾಭಿರಾಮನ್ ಸಹಾಯಕ ಸಂಪಾದಕರು : ಸುರೇಂದ್ರ ಕೌಲಗಿ